# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಡಿಸೆಂಬರ್ 18, 2024

ಸಂಪುಟ : 51 ಸಂಚಿಕೆ : 215 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಹಿಂದೂ - ಮುಸ್ಲಿಮರಿಂದ ಕೊಟ್ಟೂರೇಶ್ವರ ಲಕ್ಷ ದೀಪೋತ್ಸವಕ್ಕೆ ಭಾವೈಕ್ಯದ ಸ್ಪರ್ಶ



### ಹಳೆ ಕೊಟ್ಟೂರು ಸದಸ್ಯರಿಂದ ಶ್ರದ್ಧಾ - ಭಕ್ತಿಯ ಸೇವೆ

ಕೊಟ್ಟೂರು, ಡಿ.17- ಪಟ್ಟಣದ ಆರಾಧ್ಯ ದೈವ, ಕ್ಷೇತ್ರನಾಥ ಶ್ರೀ ಗುರು ಬಸವೇಶ್ವರ ಸ್ವಾಮಿ ಲಕ್ಷ ದೀಪೋತ್ಸ ವದ ಅಂಗವಾಗಿ ಶ್ರದ್ಧಾ - ಭಕ್ತಿಯಿಂದ ಶ್ರೀ ಸ್ವಾಮಿಯ ಸೇವೆ ಪ್ರಯುಕ್ತ ದೀಪಗಳನ್ನು ಬೆಳಗಿಸುವಲ್ಲಿ ಹಸಿರು ಹೊನಲು ತಂಡ ಮತ್ತು ಹಳೆ ಕೊಟ್ಟೂರು ತಂಡಗಳ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದ್ದರು.

ಪಟ್ಟಣದ ಬಸ್ ನಿಲ್ದಾಣದಿಂದ ರಥ ಬೀದಿಯವರೆಗೆ ಅಕ್ಕಪಕ್ಕದಲ್ಲಿ ದೀಪಗಳನ್ನು ಇಡುವ ಕೆಲಸದಲ್ಲಿ ಮುಸ್ಲಿಂ ಬಾಂಧವ ಸದಸ್ಯರು ಭಾಗವಹಿಸಿದ್ದು ಭಾವೈಕ್ಯದ ಸಂಕೇತದಂತೆ ಗೋಚರಿಸಿತ್ತು. ಅಲ್ಲದೇ ದೀಪಗಳನ್ನಷ್ಟೇ ಅಲ್ಲದೆ, ಕಸ ವಿಲೇವಾರಿಯನ್ನು ಸಹ ಸೋಮವಾರ ಮಾಡಲಾಗಿರುತ್ತದೆ. ಎರಡೂ ತಂಡಗಳ ಎಲ್ಲಾ ಸದಸ್ಯರು ಶ್ರದ್ಧಾಭಕ್ತಿಯಿಂದ ಶ್ರೀಸ್ವಾಮಿಯ ಸೇವೆ ಮಾಡಿದರು.

ಕಾರ್ತೀಕೋತ್ಸವದಲ್ಲಿ ಮಾರಾಟಗಾರರಿಗೆ ಕೊಬ್ಬರಿ ಯನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟು ಮಾರಾಟ ಮಾಡದಂತೆ ವ್ಯಾಪಾರಸ್ಥರಿಗೆ ತಿಳಿಸಿ, ಪೇಪರ್ ಬ್ಯಾಗ್ ಗಳನ್ನು ವಿತರಿಸಿದರು ಮತ್ತು ಜನರಿಗೆ ಸ್ವಚ್ಛತೆ ಬಗ್ಗೆ ಹಳೆ ಕೊಟ್ಟೂರು ತಂಡ ಮತ್ತು ಹಸಿರು ಹೊನಲು ತಂಡದಿಂದ ಜನರಿಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಎಂ. ಶ್ರೀನಿವಾಸ್, ಶಿರಿಬಿ ಕೊಟ್ರೇಶ್, ಹೆಚ್. ವಿಜಯ ಕುಮಾರ್, ಕೆ. ಕೊಟ್ರೇಶ್, ತಗ್ಗಿನಕೇರಿ ಕೊಟ್ರೇಶ್, ಅನಿಲ್, ಅಕ್ಷಯ್, ಪಿ. ಗಣೇಶ್, ಗೌಸ್, ಬಿ. ಮಂಜುನಾಥ್, ಸುಭಾನ್, ದಾದಾಪೀರ್, ಎಸ್. ಪರಶುರಾಮ್, ಬಿ.ಆರ್. ವಿಕ್ರಂ, ಬಂಜಾರ್ ನಾಗರಾಜ್, ಯಲ್ಲಪ್ಪ, ನಾಗರಾಜ್, ಪ್ರಕಾಶ್ ಮಂಡಕ್ಕಿ, ಎರಡು ತಂಡಗಳ ಸದಸ್ಯರು ಇದ್ದರು.

## ಏಕ ಚುನಾವಣೆ ಮಸೂದೆಗಳು ಲೋಕಸಭೆಯಲ್ಲಿ ಮಂಡನೆ



### ಸರ್ವಾಧಿಕಾರಿ ಕ್ರಮ ಎಂದು ಪ್ರತಿಪಕ್ಷಗಳ ತರಾಟೆ

ನವದೆಹಲಿ, 17 - ಏಕ ಚುನಾವಣೆಯ ಎರಡು ಮಸೂದೆಗಳನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ. ಕೇಂದ್ರ ಸರ್ಕಾರದ ಈ ಕ್ರಮ ಸರ್ವಾಧಿಕಾರಿ ಸ್ವರೂಪದ್ದು ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಕಾನೂನು ಸಚಿವ ಅರ್ಜುನ್ ರಾಮ್ ಮೆಘ್ವಾಲ್ ಅವರು ಸಂವಿಧಾನಕ್ಕೆ 129ನೇ ತಿದ್ದುಪಡಿ ತರುವ ಮಸೂದೆಯನ್ನು ಮಂಡಿಸಿದ್ದು, ಇದರಿಂದ ರಾಜ್ಯಗಳ ಅಧಿಕಾರಕ್ಕೆ ಧಕ್ಕೆಯಾಗುವುದಿಲ್ಲ ಎಂದರು.

90 ನಿಮಿಷಗಳ ಚರ್ಚೆಯ ನಂತರ ಮೆಘ್ವಾಲ್ ಅವರು ಮಸೂದೆಯನ್ನು ಸದನಕ್ಕೆ ಸಲ್ಲಿಸಿದರು. ಮಸೂದೆ ಮಂಡನೆಯ ಪರವಾಗಿ 269 ಹಾಗೂ ವಿರುದ್ಧವಾಗಿ 198 ಸದಸ್ಯರು ಮತ ಚಲಾಯಿಸಿದರು.

ಕೇಂದ್ರಾಡಳಿತ ಪ್ರದೇಶಗಳಾದ ಪುದುಚೆರಿ, ದೆಹಲಿ ಹಾಗೂ ಜಮ್ಮು ಮತ್ತು ಕಾಶ್ಮೀರಗಳಿಗೆ ಲೋಕಸಭೆಯ ಜೊತೆಗೆ ಚುನಾವಣೆ ನಡೆಸುವ ಕೇಂದ್ರಾಡಳಿತ ಪ್ರದೇಶಗಳ ತಿದ್ದುಪಡಿ ಮಸೂದೆಯನ್ನೂ ಮೆಘ್ವಾಲ್ ಮಂಡಿಸಿದರು.

ಪ್ರತಿಪಕ್ಷಗಳು ಆರೋಪಿಸುತ್ತಿರುವ ಹಾಗೆ ಈ ಮಸೂದೆಗಳು ಸಂವಿಧಾನದ ಮೂಲತತ್ವಗಳ ಮೇಲಿನ ದಾಳಿಯಲ್ಲ ಎಂದು ಸಚಿವರು ಹೇಳಿದರು.

ನ್ಯಾಯಿಕ ಪರಾಮರ್ಶೆ, ಸಂವಿಧಾನದ ಒಕ್ಕೂಟ ಸ್ವರೂಪ, ಅಧಿಕಾರ ಪ್ರತ್ಯೇಕತೆ, ಸೆಕ್ಯುಲರ್ ಸ್ವಭಾವ ಹಾಗೂ ಸಂವಿಧಾನದ ಪಾರಮತ್ಯಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ರಾಜಕೀಯ ಕಾರಣಗಳಿಗಾಗಿ ಮಸೂದೆಗಳಿಗೆ ವಿರೋಧಿಸಲಾಗುತ್ತಿದೆ ಎಂದರು.

ಲೋಕಸಭೆಗೆ ಮಸೂದೆ ಸಲ್ಲಿಸುವುದನ್ನು ವಿರೋಧಿಸಿದ ಕಾಂಗ್ರೆಸ್ ಸದಸ್ಯ ಮನಿಶ್ ತಿವಾರಿ, ಈ ಮಸೂದೆಗಳು ಸಂವಿಧಾನದ ಮೂಲ ಸ್ವರೂಪ ಗಳ ಮೇಲಿನ ದಾಳಿ. ಇದರಲ್ಲಿನ ಅಂಶಗಳು ಸಂಸತ್ತಿನ ತಿದ್ದುಪಡಿ ಅಧಿಕಾರವನ್ನು ಮೀರಿದ್ದಾಗಿದೆ ಎಂದರು.

ಸಮಾಜವಾದಿ ಪಕ್ಷದ ಸದಸ್ಯ ಧರ್ಮೇಂದ್ರ ಯಾದವ್ ಮಾತನಾಡಿ, ದೇಶದಲ್ಲಿ ಸರ್ವಾಧಿಕಾರ ತರಲು ಬಿಜೆಪಿಯು ಏಕ ಚುನಾವಣೆ ಮೂಲಕ ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಗೃಹ ಸಚಿವ (3ನೇ ಪುಟಕ್ಕೆ)

## ಎನ್.ಟಿ.ಎ. ದಿಂದ ಕೇವಲ ಉನ್ನತ ಶಿಕ್ಷಣ ಪ್ರವೇಶ ಪರೀಕ್ಷೆ

ನವದೆಹಲಿ, ಡಿ. 17- 2025 ರಿಂದ ಎನ್‌ಟಿಎ ಯಾವುದೇ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದಿಲ್ಲ. ಕೇವಲ ಉನ್ನತ ಶಿಕ್ಷಣ ಪ್ರವೇಶ ಪರೀಕ್ಷೆಗಳ ಕಡೆ ಗಮನ ಹರಿಸಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಮುಂದಿನ ವರ್ಷ ಎನ್‌ಟಿಎದಲ್ಲಿ ಬದಲಾವಣೆ ತರಲಾಗುವುದು ಹಾಗೂ ಹೊಸ ಹುದ್ದೆಗಳನ್ನು ಸೃಷ್ಟಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ವೈದ್ಯಕೀಯ ಪ್ರವೇಶಕ್ಕಾಗಿ ನಡೆಸುವ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಆರೋಪ (3ನೇ ಪುಟಕ್ಕೆ)



### ಶ್ರೀ ವೀರಭದ್ರೇಶ್ವರ ಸ್ವಾಮಿ ಕಾರ್ತಿಕ ದೀಪೋತ್ಸವ

ದಾವಣಗೆರೆ ಹಳೇಪೇಟೆಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ರಾತ್ರಿ ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವವು ಅಪಾರ ಸಂಖ್ಯೆಯ ಭಕ್ತರ ಶ್ರದ್ಧಾ - ಭಕ್ತಿಯ ನಡುವೆ ವಿಜೃಂಭಣೆಯಿಂದ ಜರುಗಿತು. ಶ್ರೀ ಸ್ವಾಮಿಯ ಉತ್ಸವದ ಮೆರವಣಿಗೆಯು ಹಳೇಪೇಟೆಯ ರಾಜಬೀದಿಗಳಲ್ಲಿ ಸಂಚರಿಸಿ, ವಾಪಸ್ಸಾದ ನಂತರ ಭಕ್ತರು ದೀಪವನ್ನು ಬೆಳಗಿಸಿದರು.

## ಕೈಗಾರಿಕಾ ಪ್ರದೇಶದ ಸಿಎ ನಿವೇಶನಗಳ ಪಾರದರ್ಶಕ ಹಂಚಿಕೆ



ಬೆಳಗಾವಿ, ಡಿ. 17- ಕೈಗಾರಿಕಾ ಪ್ರದೇಶಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಉದ್ದೇಶಕ್ಕೆ ಮೀಸಲಿಟ್ಟ ಸಿ.ಎ. ನಿವೇಶನಗಳನ್ನು ಪಾರದರ್ಶಕ ಮತ್ತು ನಿಯಮಗಳಿಗೆ ಅನುಸಾರ ಹಂಚಿಕೆ ಮಾಡಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ವಿಧಾನ ಪರಿಷತ್‌ನಲ್ಲಿ ಇಂದು ಸ್ಪಷ್ಟಪಡಿಸಿದ್ದಾರೆ.

ನಿವೇಶನ ಹಂಚಿಕೆಯಲ್ಲಿ, ಎಸ್ಸಿ-ಎಸ್ಟಿ ಸಮುದಾಯಗಳ ಅರ್ಹರಿಗೂ ಅವಕಾಶ ಸಿಗಬೇಕೆಂಬ ಉದ್ದೇಶದಿಂದ ಮೀಸಲಾತಿ ಕಡ್ಡಾಯಗೊಳಿಸಲಾಗಿದ್ದು, ಸ್ವಜನ ಪಕ್ಷಪಾತವಾಗಲೀ, ಅಕ್ರಮವಾಗಲೀ ನಡೆದಿಲ್ಲ ಎಂದಿದ್ದಾರೆ.

ಸಿ.ಟಿ.ರವಿ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಕೈಗಾರಿಕಾ ಪ್ರದೇಶ ಗಳಲ್ಲಿ ಶಾಲೆ, ಆಸ್ಪತ್ರೆ, ವಸತಿ ಸಮುಚ್ಚಯಗಳು, ಬ್ಯಾಂಕ್, ಪೆಟ್ರೋಲ್ ಬಂಕ್, ಕ್ಯಾಂಟೀನ್, ಸಮುದಾಯ ಭವನ, ಆರ್ ಅಂಡ್ ಡಿ ಮತ್ತು ನಾವೀನ್ಯತಾ ಕೇಂದ್ರಗಳ ಉದ್ದೇಶಗಳಿಗೆ ಸಿ.ಎ.ನಿವೇಶನಗಳನ್ನು ಮೀಸಲಿಡಲಾಗಿದೆ.

ಹೋಟೆಲ್ (3ನೇ ಪುಟಕ್ಕೆ)

## ಶಾಸಕರ ಕ್ಷೇತ್ರಾಭಿವೃದ್ಧಿಗೆ 4 ಸಾವಿರ ಕೋಟಿ

### ಸಿಎಂ ಸಹಮತಿ

ಬೆಂಗಳೂರು, ಡಿ. 17- ಕ್ಷೇತ್ರ ಅಭಿವೃದ್ಧಿಗೆ 4,000 ಕೋಟಿ ರೂ. ಬಿಡುಗಡೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕೊನೆಗೂ ಸಮ್ಮತಿಸಿದ್ದಾರೆ. ಆಡಳಿತ ಪಕ್ಷದ ಸದಸ್ಯರ ಪ್ರತಿ ಕ್ಷೇತ್ರಕ್ಕೆ ತಲಾ 20 ಕೋಟಿ ರೂ., ಪ್ರತಿಪಕ್ಷದ ಸದಸ್ಯರ ಕ್ಷೇತ್ರಗಳಿಗೆ ತಲಾ 10 ಕೋಟಿ ರೂ. ಬಿಡುಗಡೆ ಮಾಡಲಿದ್ದಾರೆ.

ಈ ಹಣದಲ್ಲಿ ಶಾಸಕರು ತಮ್ಮ ಅಧಿಕಾರ ಬಳಸಿ ಕ್ಷೇತ್ರಕ್ಕೆ ಅಗತ್ಯವಿರುವ ರಸ್ತೆ ಸೇರಿದಂತೆ (3ನೇ ಪುಟಕ್ಕೆ)

## ನೀಟ್ ಆನ್‌ಲೈನ್ ಪರೀಕ್ಷೆ : ಶೀಘ್ರದಲ್ಲೇ ನಿರ್ಧಾರ

ನವದೆಹಲಿ, ಡಿ. 17- ನೀಟ್ ಯುಜಿ ಪ್ರವೇಶ ಪರೀಕ್ಷೆಯನ್ನು ಆನ್ ಲೈನ್ ಮೂಲಕ ನಡೆಸಬೇಕೆ ಎಂಬ ಬಗ್ಗೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಈ ಕುರಿತು ಆರೋಗ್ಯ ಸಚಿವಾಲಯದ ಜೊತೆ ಎರಡು ಸುತ್ತಿನ ಮಾತುಕತೆ ನಡೆಸಲಾಗಿದೆ. ಪ್ರಸಕ್ತ ನೀಟ್ ಯುಜಿ ಪರೀಕ್ಷೆನಯ್ನು ಕಾಗದಗಳ ಮೂಲಕ ನಡೆಸಲಾಗುತ್ತಿದೆ.

ಈಗಿರುವ (4ನೇ ಪುಟಕ್ಕೆ)

## ಬೆಳಗಾವಿ : ಮಧ್ಯರಾತ್ರಿ 1 ಗಂಟೆವರೆಗೆ ಕಲಾಪ

### ಸತತ 15 ಗಂಟೆ ಕಲಾಪ ನಡೆದು ದಾಖಲೆ

ಬೆಳಗಾವಿ, ಡಿ. 17- ಸುವರ್ಣ ಸೌಧದಲ್ಲಿ ನಡೆಯುತ್ತಿರುವ ವಿಧಾನ ಸಭೆ ಕಲಾಪವು ಇದೇ ಮೊದಲ ಬಾರಿಗೆ ಮಧ್ಯರಾತ್ರಿ 1 ಗಂಟೆಯವರೆಗೂ ನಡೆದು ದಾಖಲೆ ಸೃಷ್ಟಿಸಿದೆ. ಸೋಮವಾರ ಬೆಳಗ್ಗೆ 10-40ಕ್ಕೆ ಆರಂಭವಾದ ಕಲಾಪ ಮಧ್ಯರಾತ್ರಿ 1 ಗಂಟೆಯ (4ನೇ ಪುಟಕ್ಕೆ)

## ಐಐಟಿ ಮದ್ರಾಸ್‌ನಲ್ಲಿ ಸಾಂಸ್ಕೃತಿಕ ಮೀಸಲಾತಿ

ನವದೆಹಲಿ, ಡಿ. 17- ಲಲಿತ ಕಲೆ ಹಾಗೂ ಸಾಂಸ್ಕೃತಿಕ ಸಾಧನೆ ಮಾಡಿದವರಿಗೆ ಮೀಸಲಾತಿ ನೀಡುವುದಾಗಿ ಐಐಟಿ ಮದ್ರಾಸ್ ತಿಳಿಸಿದೆ. ಈ ರೀತಿಯ ಕ್ರಮ ತೆಗೆದುಕೊಂಡ ದೇಶದ ಮೊದಲ ಐಐಟಿ ಇದಾಗಿದೆ. 2025-26ರ ಶೈಕ್ಷಣಿಕ ಸಾಲಿನಿಂದ ಈ ಮೀಸಲಾತಿ ಜಾರಿಗೆ ತರಲಾಗುವುದು ಎಂದು ಐಐಟಿ ಮದ್ರಾಸ್ ನಿರ್ದೇಶಕ ವಿ. ಕಾಮಕೋಟಿ ತಿಳಿಸಿದ್ದಾರೆ. ಕಲೆ ಹಾಗೂ ಸಂಸ್ಕೃತಿಗಳಲ್ಲಿ ಸಾಧನೆ ಮಾಡಿದವರಿಗೆ ಉತ್ತೇಜನ ಕೊಡುವುದು ಇದರ (4ನೇ ಪುಟಕ್ಕೆ)


## ಎನ್‌ಸಿಇಆರ್‌ಟಿ 9 - 12ನೇ ತರಗತಿಗೆ ಹೊಸ ಪಠ್ಯ ಪುಸ್ತಕ

ನವದೆಹಲಿ, ಡಿ. 17- ಮುಂದಿನ ವರ್ಷ ಎನ್‌ಸಿಇಆರ್‌ಟಿ ಕೆಲ ತರಗತಿಗಳ ಪಠ್ಯಪುಸ್ತಕಗಳ ವೆಚ್ಚ ಕಡಿಮೆಯಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಎನ್‌ಸಿಇಆರ್‌ಟಿ ಮಂಡಳಿಯು ಪ್ರಸಕ್ತ ಪ್ರತಿ ವರ್ಷ 5 ಕೋಟಿ ಪಠ್ಯ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಮುಂದಿನ ವರ್ಷ ಪ್ರಕಟಣೆ ಸಾಮರ್ಥ್ಯವನ್ನು 15 ಕೋಟಿಗೆ ಹೆಚ್ಚಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತಿದೆ. ಇದರಿಂದ ಪಠ್ಯ ಪುಸ್ತಕಗಳ ಬೆಲೆ ಕಡಿಮೆಯಾಗಲಿದೆ ಎಂದು ಸಚಿವರು ಹೇಳಿದ್ದಾರೆ.

2026 - 27ರ ಶೈಕ್ಷಣಿಕ ವರ್ಷದಿಂದ 9 ರಿಂದ 12ನೇ ತರಗತಿಗೆ ಹೊಸ ಪಠ್ಯ ಪುಸ್ತಕಗಳನ್ನು ಒದಗಿಸಲಾಗುವುದು ಎಂದೂ ಸಚಿವರು ತಿಳಿಸಿದ್ದಾರೆ.

ಹೊಸ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ರೂಪಿಸುವ ಪ್ರಕ್ರಿಯೆ ನಡೆದಿದೆ. ಈ ಪ್ರಕ್ರಿಯೆಯ ಅನ್ವಯ 2026-27ರಲ್ಲಿ 9 ರಿಂದ 12ನೇ ತರಗತಿಯ ಪಠ್ಯ ಪುಸ್ತಕಗಳಲ್ಲಿ ಬದಲಾವಣೆ ತರಲಾಗುವುದು ಎಂದು ಸಚಿವ ಪ್ರಧಾನ್ ಹೇಳಿದರು.

### ಶ್ಯಾಬನೂರಿನಲ್ಲಿ 21ರಂದು ಕಾರ್ತಿಕೋತ್ಸವ ಸಾಮೂಹಿಕ ವಿವಾಹ

ಶ್ರೀ ಮಹಾಂತರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ
ದಿನಾಂಕ 21.12.2024ರ ಶನಿವಾರ
ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹ
ಸಂಜೆ ಕಾರ್ತಿಕ ದೀಪೋತ್ಸವ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.


## ಶಿಕ್ಷಣದಿಂದ ಮಹಿಳೆಯರ ಜೀವನ ಸದೃಢ

### ಹರಿಹರ ಕಾರ್ಯಕ್ರಮದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್



ಹರಿಹರ, ಡಿ.17- ಮಹಿಳೆಯರು ಶಿಕ್ಷಣ ಹೊಂದಿದರೆ, ಜೀವನದಲ್ಲಿ ಯಾವುದೇ ರೀತಿಯ ತೊಂದರೆಗಳು ಬರದಂತೆ ಜೀವನವನ್ನು ಸದೃಢವಾಗಿ ನಡೆಸಿಕೊಂಡು ಹೋಗಬಹುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅಭಿಪ್ರಾಯಪಟ್ಟರು.

ನಗರದ ಗುರುಭವನದಲ್ಲಿ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಮತ್ತು ಸಮನ್ವಯ ಟ್ರಸ್ಟ್ ಸಂಯುಕ್ತವಾಗಿ ಇಂದು ಆಯೋಜಿಸಿದ್ದ ಮಹಿಳೆಯರ ಕುಂದು ಕೊರತೆ ಹಾಗೂ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ಮನೆಯಲ್ಲಿ ಮಹಿಳೆಯರ ಜನನವಾದರೆ ಕಷ್ಟಗಳು ಉದ್ಭವವಾಗುತ್ತವೆ ಎಂದು ಭಾವಿಸುವಂತಹ ಕಾಲಘಟ್ಟ ಇತ್ತು. ಆದರೆ, ಇತ್ತೀಚೆಗೆ ದೇಶವು ಪ್ರತಿಯೊಂದು ಹಂತದಲ್ಲಿ (4ನೇ ಪುಟಕ್ಕೆ)

## ಜೆ.ಎಸ್ ಭಾಗ್ಯಮ್ಮ ನಿಧನ



ದಾವಣಗೆರೆ ಶಿವಕುಮಾರ್ ಸ್ವಾಮಿ ಬಡಾವಣೆ 1ನೇ ಮೇನ್, ಸರ್ ಎಂ.ವಿ. ಪಿಯು ಕಾಲೇಜು ಹಿಂಭಾಗ, ಶಿವ ದೇವಸ್ಥಾನ ಹತ್ತಿರದ ವಾಸಿ ದಿ. ಜೆ.ಎಸ್.ಶಿವಾನಂದಸ್ವಾಮಿಯವರ ಧರ್ಮಪತ್ನಿ

**ಶ್ರೀಮತಿ ಜೆ.ಎಸ್ ಭಾಗ್ಯಮ್ಮ**

ಇವರು ದಿನಾಂಕ 17.12.2024ರ ಮಂಗಳವಾರ ಸಂಜೆ 5.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.12.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವದು.

ದುಃಖತಪ್ತರು : ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು, ಮೊ. : 94485 33928, 94830 93888




## ತಾರಮ್ಮ ನಾಗರಾಜಪ್ಪ ಬೆಟಗೇರಿ ನಿಧನ



ದಾವಣಗೆರೆ ಆನೆಕೊಂಡ ಪೇಟೆ ನಿವಾಸಿ ಶ್ರೀಮತಿ ತಾರಮ್ಮ ನಾಗರಾಜಪ್ಪ ಬೆಟಗೇರಿ ಅವರು ದಿನಾಂಕ 17.12.2024ರ ಮಂಗಳವಾರ ಮಧ್ಯಾಹ್ನ 4.45ಕ್ಕೆ ನಿಧನರಾದರು. ಮಕ್ಕಳು, ಸೊಸೆಯಂದಿರು, ಮೊಮ್ಮಗಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 18.12.2024ರ ಬುಧವಾರ ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಕಕ್ಕರಗೊಳ್ಳದ ಐರಣಿ ತಿಪ್ಪಣ್ಣ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ದಿ. ಐರಣಿ ಸುಲ್ತಾನಪ್ಪನವರ ಮಗನಾದ ಐರಣಿ ತಿಪ್ಪಣ್ಣ (69) ಅವರು ದಿನಾಂಕ : 17.12.2024ರ ಮಂಗಳವಾರ ಸಂಜೆ 4.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.12.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವ-ಗ್ರಾಮವಾದ ಕಕ್ಕರಗೊಳ್ಳದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

## ಶ್ರೀಮತಿ ಲಲಿತಾ ಕೆ. ನಿಧನ



ದಾವಣಗೆರೆ ಸಿಟಿ ವಿದ್ಯಾನಗರ ವಿನಾಯಕ ಬಡಾವಣೆ,
7ನೇ ಕ್ರಾಸ್ ವಾಸಿ
ನಾರಾಯಣ್‌ರಾವ್‌ರವರ ಧರ್ಮಪತ್ನಿ ನಿವೃತ್ತ ಶಿಕ್ಷಕರಾದ

**ಶ್ರೀಮತಿ ಲಲಿತಾ ಕೆ. (71)**

ಇವರು, ದಿನಾಂಕ 17.12.2024ರ ಮಂಗಳವಾರ ರಾತ್ರಿ 7.45ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಸೊಸೆ, ಮೊಮ್ಮಗಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.12.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಪಕ್ಕದ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 98441 61109, 80504 32452**

## ಮೊದಲನೇ ವರ್ಷದ ಪುಣ್ಯಸ್ಮರಣೆ



**ಲಿಂ|| ಡಾ|| ರೂಪಾ ಸಿದ್ದೇಶ ಬಿಸನಳ್ಳಿ**

ನಿಧನ : 18.12.2023

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ತಾಯಿ : ಗಿರಿಜಮ್ಮ, ಪತಿ : ಡಾ|| ಸಿದ್ದೇಶ ಈ ಬಿಸನಳ್ಳಿ
ಪುತ್ರ : ಆರುಶ್ ಎಸ್. ಬಿಸನಳ್ಳಿ ಕುಟುಂಬ ವರ್ಗದವರು ಹಾಗೂ ಅಪಾರ ಬಂಧು-ಮಿತ್ರರು.

|| ಶ್ರೀ ಬಾತಿ ರೇವಣಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಬೈಪಾಸ್ ತುಂಗಭದ್ರಾ ಬಡಾವಣೆ ವಾಸಿಗಳಾದ ಶ್ರೀಮತಿ ಪ್ರತಿಭಾ ಶ್ರೀ ವಾಗೀಶ್ ಇವರ ಮಾಡುವ ವಿಜ್ಞಾಪನೆಗಳು.
ದಿ. ಮಲ್ಲಿಕಾರ್ಜುನಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಸುಜಾತ**

ಇವರು ದಿನಾಂಕ 15.12.2024ರ ಭಾನುವಾರ ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು** ದಿನಾಂಕ : 19.12.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ನಂ. 1301, ಬೈಪಾಸ್ ತುಂಗಭದ್ರಾ ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಪ್ರತಿಭಾ ಶ್ರೀ ವಾಗೀಶ್ ಮತ್ತು ಶ್ರೀಮತಿ ವಾಣಿಶ್ರೀ ಶ್ರೀ ಬಿ. ಸತೀಶ್ ತೆಲಗಿ, ಬೆಳಲಗೆರೆ ಬಾತಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

# ಎರಡನೇ ಚತುರ್ಥದಲ್ಲಿ ತಾತ್ಕಾಲಿಕ ಇಳಿಕೆ; ಆರ್ಥಿಕತೆ ಚೇತರಿಸಿಕೊಳ್ಳಲಿದೆ



ನವದೆಹಲಿ, ಡಿ. 17 - ಎರಡನೇ ಚತುರ್ಥದಲ್ಲಿ ಆರ್ಥಿಕ ಬೆಳವಣಿಗೆ ದರ ಶೇ. 5.4ಕ್ಕೆ ಇಳಿಕೆಯಾಗಿರುವುದು ತಾತ್ಕಾಲಿಕವಾಗಿದೆ. ಹಾಗೂ ಮುಂದಿನ ಚತುರ್ಥಗಳಲ್ಲಿ ಆರ್ಥಿಕತೆ ಆರೋಗ್ಯಕರ ಬೆಳವಣಿಗೆ ಕಾಣಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ನಡೆದ ಪೂರಕ ಬೇಡಿಕೆಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಭಾರತ ಸ್ಥಿರ ಹಾಗೂ ನಿರಂತರ ಬೆಳವಣಿಗೆ ಕಾಣುತ್ತಿದೆ. ಕಳೆದ 3 ವರ್ಷಗಳಲ್ಲಿ ದೇಶದ ಸರಾಸರಿ ಜಿಡಿಪಿ ಬೆಳವಣಿಗೆ ದರ ಶೇ. 8.3ರಷ್ಟಿದೆ ಎಂದು ತಿಳಿಸಿದರು. ಭಾರತ ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಅತಿ ವೇಗದ ಬೆಳವಣಿಗೆ ಕಾಣುವ ದೇಶವಾಗಿ ಮುಂದುವರೆಯಲಿದೆ ಎಂದವರು ಹೇಳಿದ್ದಾರೆ.

ಎರಡನೇ ಚತುರ್ಥದಲ್ಲಿ ಬೆಳವಣಿಗೆ ದರ ತಾತ್ಕಾಲಿಕವಾಗಿ ಇಳಿಕೆಯಾಗಿದೆ. ಮುಂದಿನ ಚತುರ್ಥಗಳಲ್ಲಿ ಆರೋಗ್ಯಕರ ಆರ್ಥಿಕ ಬೆಳವಣಿಗೆಯಾಗಲಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ.

ಉತ್ಪಾದನಾ ವಲಯದಲ್ಲಿ ವ್ಯಾಪಕ ಇಳಿಕೆಯೇನೂ ಆಗಿಲ್ಲ. ಉತ್ಪಾದನಾ ವಲಯದ ಅರ್ಧದಷ್ಟು ಕ್ಷೇತ್ರಗಳು ಬಲಿಷ್ಠವಾಗಿ ಮುಂದುವರೆದಿವೆ ಎಂದವರು ಹೇಳಿದರು. ಪ್ರಥಮ ಚತುರ್ಥದಲ್ಲಿ ಶೇ. 6.7 ಹಾಗೂ ಎರಡನೇ ಚತುರ್ಥದಲ್ಲಿ ಶೇ. 5.4ರಷ್ಟು ಬೆಳವಣಿಗೆಯಾಗಿತ್ತು.

ಹಣದುಬ್ಬರದ ಕುರಿತು ಮಾತನಾಡಿದ ಸೀತಾರಾಮನ್, ಯುಪಿಎ ಅವಧಿಯಲ್ಲಿ ಹಣದುಬ್ಬರ ಎರಡಂಕಿ ಹಂತಕ್ಕೆ ತಲುಪಿತ್ತು. ಅದಕ್ಕೆ ಎನ್‌ಡಿಎ ಅವಧಿಯಲ್ಲಿ ಹಣದುಬ್ಬರ ಉತ್ತಮವಾಗಿ ನಿಯಂತ್ರಣದಲ್ಲಿದೆ. ಕಳೆದ ಏಪ್ರಿಲ್-ಅಕ್ಟೋಬರ್ ಅವಧಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ. 4.8ರಷ್ಟಿತ್ತು. ಕೋವಿಡ್ ನಂತರದ ಅವಧಿಯಲ್ಲಿ ಇದು ಅತಿ ಕಡಿಮೆ ಎಂದು ಸಚಿವೆ ತಿಳಿಸಿದರು.

2017-18ರಲ್ಲಿ ನಿರುದ್ಯೋಗದ ದರ ಶೇ. 6ರಷ್ಟಿತ್ತು ಅದು ಈಗ ಶೇ. 3.2ಕ್ಕೆ ಇಳಿಕೆಯಾಗಿದೆ ಎಂದು ಸೀತಾರಾಮನ್ ಹೇಳಿದರು.

## ನಗರದಲ್ಲಿಂದು ತಾ. ಕಸಾಪ ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ-ಕಾಲೇಜು ಅಂಗಳ ದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಶಾಲೆ ಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀಮಾತಾ ವಿದ್ಯಾಸಂಸ್ಥೆಯ ಅಧ್ಯಕ್ಷ ವೈ. ಬಿ. ಸತೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಹೊನ್ನನಾಯಕನಹಳ್ಳಿ ಪ್ರಗತಿಪರ ರೈತ ಮುರುಗೇಂದ್ರಪ್ಪ 'ಜನ ಪದರ ಜೀವ ಪರ ಮೌಲ್ಯಗಳು' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.


ಶ್ರೀಮಾತಾ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಬಿ. ಅನುಸೂಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಉಪನ್ಯಾಸಕರೂ, ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆದ ಶ್ರೀಮತಿ ಸುಮತಿ ಜಯಪ್ಪ ಅವರ ನೇತೃತ್ವದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ಡಿ.ಕೆ. ಮಲ್ಲಿಕಾರ್ಜುನ, ಶ್ರೀಮತಿ ಕೆ.ಜಿ. ಸೌಭಾಗ್ಯ, ರಟ್ಟಿಹಳ್ಳಿ ಶಿವಕುಮಾರ್ ಉಪಸ್ಥಿತರಿರುವರು.

ದಾವಣಗೆರೆ ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡುವರು.

## ಇಂದು ಅಂಬಾಭವಾನಿ ಅಮ್ಮನವರ ಗೋಂದಳಿ ಪೂಜೆ

ಕ್ಷತ್ರೀಯ ಮರಾಠ ವಿದ್ಯಾವರ್ಧಕ ಸಂಘ, ಶ್ರೀ ಜೀಜಾಮಾತಾ ಮಹಿಳಾ ಮಂಡಳಿ, ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ ಯುವ ಘಟಕ, ಶ್ರೀ ಅಂಬಾ ಭವಾನಿ ಅಮ್ಮನವರ ಸಾಮೂಹಿಕ ಗೋಂದಳ ಕಾರ್ಯಕ್ರಮ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಅಂಬಾಭವಾನಿ ಅಮ್ಮನವರ ಸಾಮೂಹಿಕ ಗೋಂದಳಿ ಪೂಜೆ ಅಂಗವಾಗಿ ದಾವಣಗೆರೆಯ ಶ್ರೀ ಕೃಷ್ಣಭವಾನಿ ಕಲ್ಯಾಣ ಮಂಟಪದಲ್ಲಿ ಇಂದು ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ಇಂದು ಬೆಳಿಗ್ಗೆ 5 ಗಂಟೆಗೆ ಪತ್ತ ಆಡುವುದು, ಬೆಳಿಗ್ಗೆ 6 ಗಂಟೆಗೆ ಪರಶುರಾಮ ಪೂಜೆ, ನಂತರ ದೇವಿಗೆ ಅಭಿಷೇಕ ಮಹಾಪೂಜೆ ಹಾಗೂ ಮಧ್ಯಾಹ್ನ 12.30 ರಿಂದ ದೇವಿ ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ.

## 22ರಂದು ಶಿವನಹಳ್ಳಿಯಲ್ಲಿ ಕೇದಾರ ಜಗದ್ಗುರುಗಳ ಪೂಜೆ



ಹರಿಹರ, ಡಿ.16- ಶಿವನಹಳ್ಳಿ ಗ್ರಾಮದಲ್ಲಿ ಇದೇ ದಿನಾಂಕ 22 ರಂದು ಭಾನುವಾರ ದಾಸೋಹ ಭವನ, ಭಕ್ತಿ ಭವನ ಲೋಕಾರ್ಪಣೆ ನಿಮಿತ್ತವಾಗಿ ಶ್ರೀ ಹಿಮವತ್ ಕೇದಾರ ಭೀಮಾಶಂಕರಲಿಂಗ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ ಹಾಗೂ ಪರಂಪರೆ ರಕ್ಷಣಾ ಧರ್ಮ ಸಮಾರಂಭವು ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿದೆ.

ಬೆಳಗ್ಗೆ 7-30 ರಿಂದ ಮಹಾಸಂಕಲ್ಪ, 8ಕ್ಕೆ ರುದ್ರಾಭಿಷೇಕ, 9 ಕ್ಕೆ ಸಂಗೀತಯುಕ್ತ ಆರಂತಿಗಳ ಪೂಜೆ, ಮಧ್ಯಾಹ್ನ 12-30 ಕ್ಕೆ ಧರ್ಮ ಸಮಾರಂಭ, 1-30 ಕ್ಕೆ ಜಗದ್ಗುರುಗಳವರ ದರ್ಶನಾಶೀರ್ವಾದ ನೀಡಲಿದ್ದಾರೆ ಎಂದು ಶಿವಯೋಗಿ ಕಂಬಳಿಮಠ ತಿಳಿಸಿದ್ದಾರೆ.

# ಒಂದು ದೇಶ ಒಂದು ಚುನಾವಣೆ ಮೋದಿ ಸರ್ಕಾರದ ಮೂರ್ಖತನದ ಪರಮಾವಧಿ

ದಾವಣಗೆರೆ, ಡಿ. 17 - ಒಂದು ದೇಶ ಒಂದು ಚುನಾವಣೆ ನಮ್ಮ ದೇಶಕ್ಕೆ ಕಾರ್ಯ ಸಾಧುವಲ್ಲ. ಇಂದು ಲೋಕಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರ ಮಂಡಿಸಿದ 'ಒಂದು ದೇಶ ಒಂದು ಚುನಾವಣೆ' ಮೋದಿ ಸರ್ಕಾರದ ಮೂರ್ಖತನದ ಪರಮಾವಧಿ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್ ಮೋದಿ ಸರ್ಕಾರದ ನಡೆಯನ್ನು ತೀವ್ರವಾಗಿ ಟೀಕಿಸಿದ್ದಾರೆ.

ವಿವಿಧ ಭಾಷೆ, ಧರ್ಮ ಹೊಂದಿರುವ ಭಾರತ ದೇಶದಲ್ಲಿ ಆಯಾಕಾಲಕ್ಕೆ ಅನುಗುಣವಾಗಿ ಚುನಾವಣೆಗಳು ನಡೆಯುತ್ತಿವೆ. ಇದೀಗ ಲೋಕಸಭೆ ಮತ್ತು ವಿಧಾನ ಸಭೆಗಳ ಚುನಾವಣೆಗಳನ್ನು ಒಟ್ಟಿಗೆ ಮಾಡಲು ಮಸೂದೆ ಮಂಡಿಸಿರುವುದು ನಮ್ಮ ದೇಶದ ವ್ಯವಸ್ಥೆಗೆ ಸರಿ ಹೊಂದುವುದಿಲ್ಲ ಎಂದಿದ್ದಾರೆ.

'ಒಂದು ದೇಶ ಒಂದು ಚುನಾವಣೆ' ಎನ್ನುವುದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ. ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ಇದರಿಂದ ಧಕ್ಕೆ ಉಂಟಾಗಲಿದೆ. ಪ್ರಜಾಪ್ರಭುತ್ವಕ್ಕೆ ಮಾರಕವಾಗಲಿದೆ. ಆಪರೇಷನ್ ಕಮಲದ ಮುಖಾಂತರ ದೇಶದ ಹಲವು ರಾಜ್ಯಗಳನ್ನು ತನ್ನ ಕೈವಶ ಮಾಡಿಕೊಂಡಿರುವ ಪ್ರಧಾನಿ ಮೋದಿ, ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ ಈ ಹಿಂದೆ ಚುನಾಯಿತ ಜನ ಪ್ರತಿನಿಧಿಗಳನ್ನು ಮಾರುಕಟ್ಟೆಯಲ್ಲಿ ಕೋಳಿ, ಕುರಿಗಳಂತೆ ಖರೀದಿಸಿ, ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿರುವುದು ನಮ್ಮ ಕಣ್ಮುಂದೆ ಇರುವಾಗ ಈ ರೀತಿ ಒಂದು ದೇಶ ಒಂದು ಚುನಾವಣೆ ಮಸೂದೆ ಮಂಡಿಸಿರುವುದು ಸರಿಯಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಇಂದು ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ 'ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ' ಅಭಿಯಾನ



ಸ್ವಾಭಿಮಾನಿ ಬಳಗವು ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಶಿಕ್ಷಣ ಅದಾಲತ್ - ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ ಅಭಿಯಾನವನ್ನು ಇಂದು ಹಮ್ಮಿಕೊಂಡಿದೆ.

ಅಭಿಯಾನವು ಹೊನ್ನಾಳಿ - ನ್ಯಾಮತಿ ತಾಲ್ಲೂಕಿನ ಸೂರಗೊಂಡನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಪ್ರಾರಂಭಗೊಳ್ಳಲಿದೆ. ಬಳಿಕ ಹಳೆ ಜೋಗ ಮತ್ತು ಹೊಸ ಜೋಗ, ಚಿನ್ನಿಕಟ್ಟೆ, ಮಾದಾಪುರ, ಕೊಡತಾಳ, ಸವಳಂಗ, ಸೋಗಿಲು, ಚಟ್ನಹಳ್ಳಿ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ, ಹಂತ-ಹಂತವಾಗಿ ಅವಳಿ ತಾಲ್ಲೂಕುಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲೂ ಅಭಿಯಾನ ನಡೆಯಲಿದೆ ಎಂದು ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರುಗಳು ಹಾಗೂ ಗ್ರಾಮಸ್ಥರು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ನಮ್ಮ ಜೊತೆಯಲ್ಲಿದ್ದು ಸಲಹೆ, ಸಹಕಾರ ನೀಡಬೇಕಾಗಿ ಅವರು ಮನವಿ ಮಾಡಿಕೊಂಡಿದ್ದಾರೆ.

## ಎರೆಹೊಸಳ್ಳಿಯಲ್ಲಿ ಇಂದು ಆರೋಗ್ಯ ಶಿಬಿರ

ಹರಿಹರ ತಾಲ್ಲೂಕಿನ ಎರೆಹೊಸಳ್ಳಿ ಶ್ರೀ ಮಹಾಯೋಗಿ ವೇಮನ ಸಂಸ್ಥಾನ ಮಠದಲ್ಲಿ ಶ್ರೀ ವೇಮನಾನಂದ ಸ್ವಾಮೀಜಿ ಜನ್ಮದಿನದ ಪ್ರಯುಕ್ತ ಡಾ. ಶ್ರೀ ಬಸವಕುಮಾರ ಸ್ವಾಮೀಜಿ ಉಪಸ್ಥಿತಿಯಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ದಾವಣಗೆರೆಯ ಆರ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಪ್ರೀತಿ ಆರ್ಕೆ ಟ್ರಸ್ಟ್ ವತಿಯಿಂದ ಡಾ. ರವಿಕುಮಾರ್ ಟಿ.ಜಿ. ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿನೋದ್ (97317 82463) ತಿಳಿಸಿದ್ದಾರೆ.

## ಉಚಿತ ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.17 - ನಗರದ ಯಾದವ ವಿದ್ಯಾರ್ಥಿ ನಿಲಯದಲ್ಲಿ ವಸತಿಗಾಗಿ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಮೇಲ್ಪಟ್ಟು ವಿದ್ಯಾಭ್ಯಾಸ ಮಾಡುವ ಯಾದವ ಸಮಾಜದ ವಿದ್ಯಾರ್ಥಿಗಳು ಉಚಿತ ವಸತಿ ಸೌಲಭ್ಯಕ್ಕೆ ಅರ್ಹರಾಗಿದ್ದಾರೆ. ಸಂಪರ್ಕಿಸಿ: 9845619207, 9880164534

## ಯುವಕನ ಶವ ಪತ್ತೆ

ದಾವಣಗೆರೆ,ಡಿ. 17 - ಚಿತ್ರದುರ್ಗ - ಬಾಲೇನಹಳ್ಳಿ ರೈಲು ನಿಲ್ದಾಣಗಳ ಮಧ್ಯೆ ಹಳಿಗಳಲ್ಲಿ 25 ರಿಂದ 30 ವರ್ಷದ, ಸಾಧಾರಣ ಮೈಕಟ್ಟು, ತಲೆಯಲ್ಲಿ ಕೂದಲು, ಮೀಸೆ-ಗಡ್ಡವಿರುವ ಅಪರಿಚಿತನ ಶವ ನಿನ್ನೆ ದೊರೆತಿದೆ.

ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಸದರಿ ಮೃತನ ಹೋಲಿಕೆಯ ಗಂಡಸು ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (08192-259643 ಅಥವಾ 9480802123) ಯನ್ನು ಸಂಪರ್ಕಿಸಬಹುದು.

# ಹತ್ತನೇ ವರ್ಷದ ಪುಣ್ಯಸ್ಮರಣೆ



ದಿ|| ಲಕ್ಷ್ಮಣ್‌ರಾವ್ ಪವಾರ್

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ

**ಶ್ರೀಮತಿ ಮಂಜುಳಾಬಾಯಿ ದಿ|| ಶ್ರೀ ಅಜ್ಜಪ್ಪ ಪವಾರ್**

**ಶ್ರೀಮತಿ ಯಲ್ಲಮ್ಮಬಾಯಿ ದಿ|| ಶ್ರೀ ನೀಲಪ್ಪ ಪವಾರ್ ಮತ್ತು ಮಕ್ಕಳು**

**ಶ್ರೀಮತಿ ನಾಗಮ್ಮಬಾಯಿ ದಿ|| ಶ್ರೀ ರಾಮಪ್ಪ ಪವಾರ್ ಮತ್ತು ಮಕ್ಕಳು**

**ಕುಮಾರಿ ನಳಿನ, Software Engineer U.K.**

**ಶ್ರೀಮತಿ ಅಂಬಿಕ ಶ್ರೀ ಮಾಲತೇಶ ಪವಾರ್,**

**ಶ್ರೀಮತಿ ರೂಪ ಶ್ರೀ ಸತೀಶ್ ಪವಾರ್,**

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪತ್ನಿ : **ಸುಮಿತ್ರಬಾಯಿ ಲಕ್ಷ್ಮಣ್ ಪವಾರ್,**

ಮಗಳು : **ಶ್ರೀಮತಿ ನಂದಿನಿ ಶ್ರೀ ಕೋಟೇಶ್**

ಮಗ- ಸೊಸೆ : **ಶ್ರೀಮತಿ ಸಹನಾ ಶ್ರೀ ಮಧು ಪವಾರ್,**

**ಅಮೋಘ, ಪ್ರತೀಕ್, ಪ್ರಣವ್, ಸಾನಿಕ, ಸಮನ್ವಿ ಪವಾರ್ ಹಾಗೂ ಬಂಧು-ಮಿತ್ರರು**

**ಶ್ರೀ ಗಣೇಶ್ ಚಾರ್ಕೋಲ್**
ಅರುಣ ಚಿತ್ರಮಂದಿರದ ಬಳಿ, ಪಿ.ಬಿ. ರಸ್ತೆ, ದಾವಣಗೆರೆ.

**ಶ್ರೀ ಗಣೇಶ್ ಸ್ಟೀಲ್ಸ್ ಅಂಡ್ ಸಿಮೆಂಟ್ಸ್**
ಶಿವಾಲಿ ಟಾಕೀಸ್ ಹತ್ತಿರ, ಕೊಂಡಜ್ಜಿ ರಸ್ತೆ, ದಾವಣಗೆರೆ.

# ಜಗಳೂರಿನಲ್ಲಿ ಕೆಎಸ್ಸಾರ್ಟಿಸಿ ಬಸ್ ಡಿಪೋಕ್ಕಾಗಿ ಆಗ್ರಹ



**ಜಗಳೂರಿನಿಂದ ಪಾದಯಾತ್ರೆಯಲ್ಲಿ ಆಗಮಿಸಿದ ಪ್ರತಿಭಟನಾಕಾರರಿಂದ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ**

ದಾವಣಗೆರೆ, ಡಿ. 17 - ಜಗಳೂರಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ನಿರ್ಮಾಣಕ್ಕೆ ಒತ್ತಾಯಿಸಿ ಪ್ರಗತಿ ಪರ ಸಂಘಟನೆಗಳು ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ಜಗಳೂರಿನಿಂದ ಸೋಮವಾರ ಪಾದಯಾತ್ರೆ ಮೂಲಕ ಹೊರಟ ಪ್ರತಿಭಟನಾಕಾರರು ದೇವಿಕೆರೆ, ಬಿಳಿಚೋಡು, ಅಣಜಿ, ಮೆಳ್ಳೇಕಟ್ಟೆ, ಎಲೆಬೇತೂರು ಮುಖಾಂತರ ದಾವಣಗೆರೆ ನಗರದ ಅರಳಿಮರ ವೃತ್ತ, ಗಾಂಧಿ ವೃತ್ತದ ಮೂಲಕ ಸರ್ಕಾರಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗುತ್ತಾ ಕೆಎಸ್ ಆರ್‌ಟಿಸಿ ಡಿಪೋ ಮುಂಭಾಗ ಜಮಾಯಿಸಿದರು.

ಪ್ರಗತಿಪರ ಹೋರಾಟಗಾರ, ವಕೀಲ ಆರ್. ಓಬಳೇಶ್ ಮಾತನಾಡಿ, ಜಗಳೂರಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸ್ಥಾಪಿಸಲು ಒತ್ತಾಯಿಸಿ ದಶಕಗಳಿಂದ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದರೂ, ಕೇವಲ ಪಟ್ಟಣದ 51 ಸರ್ವೇ ನಂಬರ್‌ನಲ್ಲಿ ಜಾಗ ನಿಗದಿ ಮಾಡುವ ಮೂಲಕ ಪ್ರಸ್ತಾವನೆಗೆ ಸೀಮಿತವಾಗಿದೆ. ಕೂಡಲೇ ಸರ್ಕಾರಿ ಬಸ್ ಡಿಪೋ ನಿರ್ಮಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರ ಸ್ವರೂಪದ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಕರುನಾಡ ನವ ನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಮಹಾಲಿಂಗಪ್ಪ ಎಚ್.ಎಂ. ಹೊಳೆ ಮಾತನಾಡಿ, ಕಳೆದ ಆಡಳಿತ ಸರ್ಕಾರಗಳು ಜಗಳೂರಿನಲ್ಲಿ ಬಸ್ ಡಿಪೋ ಸ್ಥಾಪನೆ, ಶಂಕು ಸ್ಥಾಪನೆಗೆ ದಿನಾಂಕ ನಿಗದಿಗೊಳಿಸಿ, ಕೆಲ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಅಧಿಕಾರಿಗಳು ನಂತರ ಕಾರ್ಯಕ್ರಮ ರದ್ದುಪಡಿಸಿದ್ದರು. ಇಂದಿನ ಪಾದಯಾತ್ರೆ ಹೋರಾಟ ಅಧಿವೇಶನದಲ್ಲಿ ಧ್ವನಿಯಾಗಬೇಕು. ಸಚಿವರು, ಶಾಸಕರು ಚರ್ಚಿಸಬೇಕು ಎಂದು ಒತ್ತಾಯಿಸಿದರು.

ಎಐವೈಎಫ್ ಮುಖಂಡ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ಬರಪೀಡಿತ ತಾಲ್ಲೂಕಿನ ಬಗ್ಗೆ ಜಿಲ್ಲೆಯ ಅಧಿಕಾರಿಗಳ, ಜನಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯದಿಂದ ಸರ್ಕಾರಿ ಬಸ್ ಸಾರಿಗೆ ಸೇವೆಯಿಂದ ವಂಚಿತರಾಗಿದ್ದಾರೆ. ಸರ್ಕಾರಿ ಬಸ್ ಡಿಪೋವಿಲ್ಲದೆ ಸರ್ಕಾರದ ಮಹತ್ತರ ಯೋಜನೆ, ಶಕ್ತಿ ಯೋಜನೆ, ಗ್ರಾಮೀಣ ಭಾಗದ ಮಹಿಳೆಯರಿಗೆ ಮರೀಚಿಕೆಯಾಗಿವೆ. ವಿದ್ಯಾರ್ಥಿಗಳು ಪ್ರತಿ ನಿತ್ಯ ಆಟೋ, ಗೂಡ್ಸ್ ವಾಹನಗಳಲ್ಲಿ ಜೀವ ಕೈಯಲ್ಲಿ ಹಿಡಿದು ಶಾಲಾ - ಕಾಲೇಜುಗಳಿಗೆ ಬರುವುದಲ್ಲದೆ. ಸಮಯಕ್ಕೆ ಸರಿಯಾಗಿ ಬರದೇ ಪಾಠ ಪ್ರವಚನಗಳಿಂದ ದೂರ ಉಳಿಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

**ಬಸ್ ಬಿಡುವ ಭರವಸೆ :** ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿ ಸಿದ್ದೇಶ್ ಮನವಿ ಸ್ವೀಕರಿಸಿ ಮಾತನಾಡಿ, ತಮ್ಮ ಬೇಡಿಕೆಯಂತೆ ಡಿಪೋ ಸ್ಥಾಪನೆಗೆ ಕೇಂದ್ರ ಕಛೇರಿಗೆ ಮನವಿ ರವಾನಿಸಲಾಗುವುದು. 9 ಮಾರ್ಗಗಳಲ್ಲಿ ಬಸ್ ಬಿಡಲು ಸಮೀಕ್ಷೆ ನಡೆಸಿ ಹಂತ ಹಂತವಾಗಿ ಬಿಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪ್ರಗತಿಪರ ಹೋರಾಟಗಾರರಾದ ಧನ್ಯಕುಮಾರ್ ಎಚ್.ಎಂ. ಹೊಳೆ, ಸತೀಶ್ ಮಲೆಮಾಚಿಕೆರೆ, ಅನಂತಮೂರ್ತಿ, ವಕೀಲ ಅಂಜಿನಪ್ಪ, ಶಿವಕುಮಾರ್, ಕುಮಾರ್ ಭರಮ ಸಮುದ್ರ, ಜೀವನ್, ಇಂದಿರಾ, ಪಲ್ಲಾಗಟ್ಟೆ ಸುಧಾ, ಶಶಿಕಲಾ, ಚಿರಂಜೀವಿ, ಹಫೀಜ್ ಉಲ್ಲಾ, ಸೂರಜ್ಜ, ಗೌರಿಪುರ ಸತ್ಯಮೂರ್ತಿ, ದೊಣೆಹಳ್ಳಿ ತಿಪ್ಪೇಸ್ವಾಮಿ, ಗುಮ್ಮನೂರು ಬಸವರಾಜ್, ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಎಐವೈಎಫ್ ರಾಜ್ಯ ಕಾರ್ಯದರ್ಶಿ ಎಚ್.ಎಂ. ಸಂತೋಷ್, ಓಬಣ್ಣ, ಚೌಡಮ್ಮ, ಹನುಮಂತಪ್ಪ, ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

# ಏಕಕಾಲದ ಚುನಾವಣೆ ಭಾರತಕ್ಕೆ ಹೊಸದಲ್ಲ ; ಕೇಂದ್ರದ ವಿವರಣೆ

ನವದೆಹಲಿ, ಡಿ. 17 - ಏಕಕಾಲಕ್ಕೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆ ನಡೆಸುವ ಪರಿಕಲ್ಪನೆ ಭಾರತಕ್ಕೆ ಹೊಸದಲ್ಲ ಎಂದು ಕೇಂದ್ರ ಸರ್ಕಾರ, ಏಕಕಾಲದ ಚುನಾವಣಾ ಮಸೂದೆಗಳ ಮಂಡನೆಗೆ ಮುಂಚೆ ವಿವರಣೆ ನೀಡಿದೆ.

ಸಂವಿಧಾನ ಅಂಗೀಕಾರಗೊಂಡ ನಂತರ 1951 ರಿಂದ 1967ರವರೆಗೆ ನಡೆದ ಲೋಕಸಭೆ ಹಾಗೂ ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಏಕಕಾಲಕ್ಕೆ ನಡೆದಿದ್ದವು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

1951-52ರಲ್ಲಿ ಮೊದಲ ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಚುನಾವಣೆಗಳು ನಡೆದಿದ್ದವು. ಆನಂತರ 1957, 1962 ಹಾಗೂ 1967ರಲ್ಲಿ ಏಕಕಾಲಕ್ಕೆ ಚುನಾವಣೆಗಳು ನಡೆದಿದ್ದವು ಎಂದು ಸರ್ಕಾರ ಹೇಳಿದೆ.

ಆದರೆ, 1968 ಹಾಗೂ 1969ರಲ್ಲಿ ಕೆಲ ರಾಜ್ಯಗಳ ವಿಧಾನಸಭೆಗಳು ಅವಧಿಗೆ ಮುಂಚೆ ವಿಸರ್ಜನೆಗೊಂಡ ಕಾರಣದಿಂದ ಏಕಕಾಲದ ಚುನಾವಣೆಯ ಪ್ರಕ್ರಿಯೆಗೆ ಅಡ್ಡಿಯಾಯಿತು ಎಂದು ಸರ್ಕಾರ ಹೇಳಿದೆ.

1970ರಲ್ಲಿ ಲೋಕಸಭೆಯನ್ನು ಅವಧಿಗೆ ಮುಂಚೆ ವಿಸರ್ಜಿಸಲಾಯಿತು ಹಾಗೂ 1971ರಲ್ಲಿ ಹೊಸದಾಗಿ ಚುನಾವಣೆ ನಡೆಸಲಾಯಿತು. ಆದರೆ, ಈ ಬಾರಿ ಲೋಕಸಭೆಯ ಅವಧಿಯನ್ನು 5 ರಿಂದ 6 ವರ್ಷಕ್ಕೆ ವಿಸ್ತರಿಸಲಾಯಿತು. ತುರ್ತು ಪರಿಸ್ಥಿತಿ ಹೇರಿಕೆ ಕಾರಣದಿಂದ ಈ ಬದಲಾವಣೆ ಮಾಡಲಾಯಿತು ಎಂದು ಸರ್ಕಾರ ತಿಳಿಸಿದೆ. ನಂತರದಲ್ಲಿ ಕೆಲ ಲೋಕಸಭೆಗಳು ತಮ್ಮ ಅವಧಿಯನ್ನು ಪೂರ್ಣಗೊಳಿಸಿದ್ದರೆ ಇನ್ನೂ ಕೆಲವು ಅವಧಿಗೆ ಮುಂಚೆಯೇ ವಿಸರ್ಜನೆಯಾಗಿವೆ.

ರಾಜ್ಯ ವಿಧಾನಸಭೆಗಳಲ್ಲೂ ಇದೇ ಪರಿಸ್ಥಿತಿ ಎದುರಾಗಿದೆ. ಅವಧಿಗೆ ಮುಂಚೆ ಚುನಾವಣೆ ನಡೆಯುವುದು ಹಾಗೂ ಅವಧಿಗಳ ವಿಸ್ತರಣೆ ನಿರಂತರ ಎದುರಾಗುತ್ತಿರುವ ಸವಾಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಇದರಿಂದಾಗಿ ಏಕಕಾಲಕ್ಕೆ ಚುನಾವಣೆ ನಡೆಸುವ ಪ್ರಕ್ರಿಯೆಗೆ ಅಡ್ಡಿಯಾಗಿದೆ. ದೇಶಾದ್ಯಂತ ಬೇರೆ ಬೇರೆ ಅವಧಿಯಲ್ಲಿ ಚುನಾವಣೆ ನಡೆಸುವಂತಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಏಕಕಾಲಕ್ಕೆ ಚುನಾವಣೆ ನಡೆಸುವುದರಿಂದ ಆಡಳಿತದಲ್ಲಿ ನಿರಂತರತೆಗೆ ಉತ್ತೇಜನ ಸಿಗುತ್ತದೆ ಎಂದು ಸರ್ಕಾರ ರಚಿಸಿದ್ದ ಉನ್ನತ ಹಂತದ ಸಮಿತಿ ವರದಿ ನೀಡಿದೆ. ಒಂದರ ಹಿಂದೆ ಒಂದರಂತೆ ಬರುತ್ತಿರುವ ಚುನಾವಣೆಗಳ ಕಾರಣದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳು, ಅದರ ನಾಯಕರು, ಜನಪ್ರತಿನಿಧಿಗಳು ಆಡಳಿತದ ಬದಲು ಮುಂಬರುವ ಚುನಾವಣೆಗಳ ಕಡೆ ಗಮನ ಹರಿಸುವಂತಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಕಾರಣದಿಂದಾಗಿಯೇ ಏಕಕಾಲಕ್ಕೆ ಚುನಾವಣೆ ನಡೆಸುವ ಅಗತ್ಯ ಎದುರಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

# ಮಾಸ್ಕೋದಲ್ಲಿ ರಷ್ಯಾ ಜನರಲ್ ಸಾವು

**ಸ್ಫೋಟ ನಡೆಸಿದ್ದು ತಾನೇ ಎಂದು ಉಕ್ರೇನ್**

ಮಾಸ್ಕೋ,ಡಿ. 17 - ರಷ್ಯಾದ ಹಿರಿಯ ಜನರಲ್ ಒಬ್ಬರ ಅಪಾರ್ಟ್‌ಮೆಂಟ್ ಎದುರಿನ ಸ್ಕೂಟರ್‌ನಲ್ಲಿ ಇರಿಸಲಾಗಿದ್ದ ಬಾಂಬ್ ಸಿಡಿದು ಜನರಲ್ ಸಾವನ್ನಪ್ಪಿದ್ದಾರೆ. ಈ ದಾಳಿಯನ್ನು ನಡೆಸಿದ್ದು ತಾನೇ ಎಂದು ಉಕ್ರೇನ್ ತಿಳಿಸಿದೆ.

ರಷ್ಯಾ ಸೈನ್ಯದ ಅಣು, ಜೈವಿಕ ಹಾಗೂ ರಾಸಾಯನಿಕ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿರುವ ಲೆಫ್ಟಿನೆಂಟ್ ಜನರಲ್ ಐಗೋರ್ ಕಿರಿಲೊವ್ ಅವರು ತಮ್ಮ ಕಚೇರಿಗೆ ತೆರಳುವ ಸಮಯದಲ್ಲಿ ಸಾವನ್ನಪ್ಪಿದ್ದಾರೆ. ಈ ದಾಳಿಯಲ್ಲಿ ಕಿರಿಲೊವ್ ಸಹಾಯಕ ಸಹ ಸಾವನ್ನಪ್ಪಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ನಡೆಸಿರುವ ದಾಳಿಯಲ್ಲಿ ಕಿರಿಲೊವ್ ತೆಗೆದುಕೊಂಡಿರುವ ಕ್ರಮಗಳ ಹಿನ್ನೆಲೆಯಲ್ಲಿ ಬ್ರಿಟನ್ ಹಾಗೂ ಕೆನಡಾ ಸೇರಿದಂತೆ ಹಲವು ದೇಶಗಳು ನಿರ್ಬಂಧ ಹೇರಿವೆ. ಅವರ ವಿರುದ್ಧ ಉಕ್ರೇನ್ ಸುರಕ್ಷತಾ ಸೇವೆ ನಿನ್ನೆಯಷ್ಟೇ ಅಪರಾಧಿಕ ತನಿಖೆ ಆರಂಭಿಸಿತ್ತು. ಅವರು ನಿಷೇಧಿತ ರಾಸಾಯನಿಕ ಶಸ್ತ್ರಗಳನ್ನು ಬಳಸಲು ನಿರ್ದೇಶನ ನೀಡಿದ್ದಾರೆ ಎಂದು ಉಕ್ರೇನ್ ಆರೋಪಿಸಿತ್ತು.

ಫೆಬ್ರವರಿ 2022ರಲ್ಲಿ ಉಕ್ರೇನ್ ವಿರುದ್ಧ ಪೂರ್ಣ ಪ್ರಮಾಣದ ಸಮರ ಆರಂಭಿಸಿದ ನಂತರ 4800 ಬಾರಿ ರಷ್ಯಾ ರಾಸಾಯನಿಕ ಶಸ್ತ್ರಗಳನ್ನು ಬಳಸಿರುವುದು ದಾಖಲಿಸಿರುವುದಾಗಿ ಉಕ್ರೇನ್ ಸುರಕ್ಷತಾ ದಳ ತಿಳಿಸಿದೆ. ಮೊದಲ ಮಹಾ ಸಮರದಲ್ಲಿ ಉಕ್ರೇನ್ ಬಳಸಲಾಗಿದ್ದ ಕ್ಲೋರೋಪಿಕ್ರಿನ್ ಎಂಬ ವಿಷಕಾರಿ ಅನಿಲವನ್ನು ಉಕ್ರೇನ್ ಪಡೆಗಳ ವಿರುದ್ಧ ಬಳಸಲಾಗಿದೆ ಎಂದು ಅಮೆರಿಕಾದ ವಿದೇಶಾಂಗ ಇಲಾಖೆ ತಿಳಿಸಿತ್ತು.

ಉಕ್ರೇನ್ ವಿರುದ್ಧ ರಾಸಾಯನಿಕ ಶಸ್ತ್ರಗಳನ್ನು ಬಳಸಿದ ಆರೋಪವನ್ನು ರಷ್ಯಾ ತಳ್ಳಿ ಹಾಕಿತ್ತು. ಉಕ್ರೇನ್ ಏಜೆಂಟರೇ ಸಮರದಲ್ಲಿ ರಾಸಾಯನಿಕ ಶಸ್ತ್ರಗಳನ್ನು ಬಳಸುತ್ತಿದ್ದಾರೆ ಎಂದು ರಷ್ಯಾ ಪ್ರತ್ಯಾರೋಪ ಮಾಡಿತ್ತು.

2017ರಲ್ಲಿ ಕಿರಿಲೊವ್ ಅವರು ರಷ್ಯಾದ ಅಣು ಸುರಕ್ಷತಾ ಪಡೆಗಳ ಮುಖ್ಯಸ್ಥರ ಸ್ಥಾನ ವಹಿಸಿಕೊಂಡಿದ್ದರು. ಉಕ್ರೇನ್ ರಾಸಾಯನಿಕ ದಾಳಿ ನಡೆಸಲು ಹಾಗೂ ವಿಕಿರಣ ವಸ್ತುಗಳ ದಾಳಿ ನಡೆಸಲು ಯೋಜನೆ ನಡೆಸಿದೆ ಎಂದು ಕಿರಿಲೊವ್ ಹಲವು ಬಾರಿ ಆರೋಪಿಸಿದ್ದರು.

ರಿಮೋಟ್ ದಾಳಿ ನಡೆಸುವ ಮೂಲಕ ಕಿರಿಲೊವ್ ಹತ್ಯೆ ಮಾಡಲಾಗಿದೆ ಎಂದು ರಷ್ಯಾದ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ. ಈ ದಾಳಿ ಉಗ್ರವಾದಿ ಕೃತ್ಯ ಎಂದು ರಷ್ಯಾದ ತನಿಖಾ ಸಂಸ್ಥೆಗಳು ಹೇಳಿದ್ದು, ಇದಕ್ಕಾಗಿ ಉಕ್ರೇನ್‌ಗೆ ಶಿಕ್ಷೆ ವಿಧಿಸುವುದಾಗಿ ಹೇಳಿವೆ.

ಉಕ್ರೇನ್ ಸೈನಿಕ ವೈಫಲ್ಯಗಳನ್ನು ಅನುಭವಿಸಿದೆ. ಇದರಿಂದ ಜನರ ಗಮನ ಬೇರೆಡೆ ಸೆಳೆಯಲು ಇಂತಹ ದಾಳಿ ನಡೆಸಲಾಗಿದೆ ಎಂದು ರಷ್ಯಾ ಆರೋಪಿಸಿದೆ.

# ಕೈಗಾರಿಕಾ ಪ್ರದೇಶದ ಸಿಎ ನಿವೇಶನಗಳ ಪಾರದರ್ಶಕ ಹಂಚಿಕೆ

**(1ನೇ ಪುಟದಿಂದ)** ಸಹಾ ಇದೇ ನಿಯಮದಡಿ ಬರಲಿದ್ದು, ಒಬ್ಬರಿಗೆ ಒಂದು ಸಿ.ಎ. ನಿವೇಶನ ಮಾತ್ರ ಹಂಚಿಕೆ ಮಾಡಬೇಕೆಂಬ ನಿರ್ಬಂಧ ಇಲ್ಲ, ಅರ್ಹ ಸಂಸ್ಥೆ ಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಗುತ್ತದೆ ಎಂದರು.

ಸಿ.ಎ. ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಪ್ರಮುಖ ರಾಜ್ಯ ಪತ್ರಿಕೆಗಳು ಹಾಗೂ ಆನ್‌ಲೈನ್ ಮೂಲಕವೂ ಜಾಹೀರಾತು ವ್ಯವಸ್ಥೆ ಜಾರಿಗೆ ತಂದಿದ್ದು, ಒಟ್ಟು 93 ಕಡೆಗೆ ಜಾಹೀರಾತು ನೀಡಲಾಗಿತ್ತು.

42 ಸಿ.ಎ. ನಿವೇಶನಗಳಿಗೆ ಒಂದೊಂದೇ ಅರ್ಜಿ ಬಂದಿದ್ದವು, ಇವುಗಳನ್ನು ತಿರಸ್ಕರಿಸಲಾಗಿದೆ, ಎರಡು ಸಿ.ಎ. ನಿವೇಶನಗಳನ್ನು ಉದ್ಯಮಿಗಳು ಸರ್ಕಾರಕ್ಕೆ ಹಿಂದಿರುಗಿಸಿದ್ದರೆ, ಇನ್ನೂ 39 ನಿವೇಶನಗಳು ಉಳಿದಿವೆ.

ಈ ಹಿಂದೆ ಕೈಗಾರಿಕಾ ಸಚಿವರೇ ಸಿ.ಎ. ನಿವೇಶನಗಳ ಹಂಚಿಕೆಯ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಪ್ರಸ್ತುತ ಕೆಐಎಡಿಬಿ ಸಿಇಒ ನೇತೃತ್ವದ ಉನ್ನತ ಸಮಿತಿ ರಚಿಸಿದ್ದು, 95 ಎಕರೆ ಜಾಗದಲ್ಲಿ ಇನ್ನೂ 152 ನಿವೇಶನಗಳಿವೆ.

ಬಿಜೆಪಿ ಸರ್ಕಾರವು ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ಗೆ ಸೇರಿದ ಜಾಗದಲ್ಲಿ ಒಂದು ಶಿಕ್ಷಣ ಸಂಸ್ಥೆಗೆ ಜಮೀನು ಕೊಟ್ಟಿದ್ದರಿಂದ ಬೊಕ್ಕಸಕ್ಕೆ 135 ಕೋಟಿ ರೂ. ನಷ್ಟವಾಗಿದೆ, ಇಂತಹ ಹಂಚಿಕೆಗಳಲ್ಲಿ ಪ್ರತಿಪಕ್ಷ ರಾಜಕೀಯ ಮಾಡಿದರೆ, ನಮಗೂ ರಾಜಕೀಯ ಮಾಡಲು ಬರುತ್ತದೆ ಎಂದು ತಿರುಗೇಟು ನೀಡಿದರು.

ಭಾರತಿ ಶೆಟ್ಟಿ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೈಗಾರಿಕಾ ಉದ್ದೇಶಕ್ಕೆ ಜಮೀನು ಸ್ವಾಧೀನದ ನಂತರ ಆಯಾ ಪ್ರದೇಶದ ಮಾರ್ಗಸೂಚಿ ಬೆಲೆ ಆಧರಿಸಿ ರೈತರಿಗೆ ಆರ್‌ಟಿಜಿಎಸ್ ಮೂಲಕ ನೇರ ಪರಿಹಾರ ಪಾವತಿಸಲಾಗುತ್ತಿದೆ.

ಮಧ್ಯವರ್ತಿಗಳು ಹಾಗೂ ಜಮೀನಿನ ಜಿಪಿಎ ಹೊಂದಿದವರಿಗೆ ಹಣ ವರ್ಗಾವಣೆ ವ್ಯವಸ್ಥೆ ಇಲ್ಲ, ನಿಯಮಗಳ ಪ್ರಕಾರ ರೈತರು ಮತ್ತು ಉದ್ಯಮಿಗಳ ಜಂಟಿ ಸಹಭಾಗಿತ್ವಕ್ಕೆ ಅವಕಾಶವಿಲ್ಲ, ಪರಿಹಾರ ಬೇಡ ಎನ್ನುವವರಿಗೆ ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ನಿವೇಶನ ನೀಡಲು ನಿಯಮಗಳಲ್ಲಿ ಅವಕಾಶವಿದೆ ಎಂದರು.

ಟಿ.ಎನ್.ಜವರಾಯಿಗೌಡರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬೆಂಗಳೂರು ನಾಗರಿಕರು ಮತ್ತು ಉದ್ಯಮಿಗಳ ಉಪಯೋಗಕ್ಕೆ 2ನೇ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲಾಗುವುದು, ಇದಕ್ಕಾಗಿ ಮೂರ್ನಾಲ್ಕು ಸ್ಥಳಗಳನ್ನು ಗುರುತಿಸಿದ್ದು, ಐಡೆಕ್ ಸಂಸ್ಥೆ ಅಧ್ಯಯನ ನಡೆಸುತ್ತಿದೆ, ಇನ್ನೊಂದು ವಾರದಲ್ಲಿ ಸ್ಪಷ್ಟ ಚಿತ್ರಣ ಸಿಗಲಿದೆ. ನಂತರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು, ಸಂಸ್ಥೆ ಸ್ಥಳವನ್ನು ಅಖೈರುಗೊಳಿಸುತ್ತದೆ. ಇದರಲ್ಲಿ ತಮ್ಮ ಹಸ್ತಕ್ಷೇಪ ಇರುವುದಿಲ್ಲ.

ಪ್ರಯಾಣಿಕರ ದಟ್ಟಣೆ, ಕೈಗಾರಿಕಾ ಸಾಗಾಣಿಕೆ, ಸ್ಥಳದ ಭೌಗೋಳಿಕ ಲಕ್ಷಣ ಇತ್ಯಾದಿಗಳನ್ನು ಪರಿಗಣಿಸಿ, ವಿಮಾನ ನಿಲ್ದಾಣ ಪ್ರಾಧಿಕಾರ ಸ್ಥಳವನ್ನು ಪರಿಶೀಲಿಸಿ, ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಪಾಟೀಲ ತಿಳಿಸಿದ್ದಾರೆ.

ಸ್ಥಳ ಅಖೈರಾದ ನಂತರವಷ್ಟೇ ಭೂಸ್ವಾಧೀನ ಪ್ರಕ್ರಿಯೆ ಶುರುವಾಗಲಿದೆ, ಆ ಪ್ರದೇಶದ ಮಾರ್ಗಸೂಚಿ ದರದ ಅನ್ವಯ ಜಮೀನು ಕಳೆದುಕೊಳ್ಳುವ ರೈತರಿಗೆ ಸೂಕ್ತ ಪರಿಹಾರ ನೀಡಲಾಗುವುದು ಎಂದರು.

# ಕ್ಷೇತ್ರಾಭಿವೃದ್ಧಿಗೆ 4 ಸಾವಿರ ಕೋಟಿ

**(1ನೇ ಪುಟದಿಂದ)** ಇತರೆ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು.

2025ರ ಮಾರ್ಚ್ 31ರೊಳಗಾಗಿ ಬಿಡುಗಡೆ ಹಣವನ್ನು ವೆಚ್ಚ ಮಾಡುವಂತೆ ಸೂಚಿಸಲಿದ್ದಾರೆ.

ಪ್ರಸಕ್ತ ಬಿಡುಗಡೆಗೊಳ್ಳುತ್ತಿರುವುದು ಮೊದಲ ಕಂತಿನ ಹಣವಾಗಿದ್ದು, ಮುಂದಿನ ದಿನಗಳಲ್ಲಿ ಸರಿಸಮಾನ ಪ್ರಮಾಣದ ಹಣ ನೀಡುವ ಬಗ್ಗೆಯೂ ಮುಖ್ಯಮಂತ್ರಿ ಅವರು ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ.

ಕ್ಷೇತ್ರಗಳ ಅಭಿವೃದ್ಧಿಗೆ ತಲಾ 100 ಕೋಟಿ ರೂ. ನೀಡುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದರು, ಆದರೆ, ಕಳೆದ ಒಂದೂವರೆ ವರ್ಷಗಳಿಂದ ಯಾವುದೇ ಹಣ ಬಿಡುಗಡೆ ಆಗದೆ ಜನಪ್ರತಿನಿಧಿಗಳು ಸಾರ್ವಜನಿಕರಿಂದ ಟೀಕೆಗೆ ಒಳಗಾಗಿದ್ದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲೂ ವಿರೋಧ ಪಕ್ಷದ ಸದಸ್ಯರು ಈ ವಿಷಯದಲ್ಲಿ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.

ಗ್ಯಾರಂಟಿ ನೆಪದಲ್ಲಿ ಕ್ಷೇತ್ರದ ಅಭಿವೃದ್ಧಿಗಳಿಗೆ ಹಣ ಬಿಡುಗಡೆ ಆಗುತ್ತಿಲ್ಲ, ಪಂಚ ಯೋಜನೆಗಳನ್ನು ಮುಂದುವರೆಸುವುದರ ಜೊತೆಗೆ ನಮಗೆ ರಸ್ತೆ ಅಭಿವೃದ್ಧಿಗೆ ತಕ್ಷಣ ಹಣ ನೀಡಿ ಎಂದು ಆಡಳಿತ ಪಕ್ಷದ ಸದಸ್ಯರೂ ಧ್ವನಿಗೂಡಿಸಿದ್ದರು. ಉತ್ತರ ಕರ್ನಾಟಕ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿಂದು ಪಕ್ಷಾತೀತವಾಗಿ ಚರ್ಚೆ ನಡೆಸಿದ ಸದಸ್ಯರು, ಅಭಿವೃದ್ಧಿಗೆ ಹಣ ಬಿಡುಗಡೆ ಮಾಡುವಂತೆ ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ಸದಸ್ಯರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಅವರು, ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಮೊದಲ ಕಂತಿನ ಹಣ ಬಿಡುಗಡೆಗೆ ನಿರ್ಧರಿಸಿದ್ದಾರೆ.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆದ ಚರ್ಚೆಗೆ ಗುರುವಾರ ಮುಖ್ಯಮಂತ್ರಿ ಉತ್ತರ ನೀಡಲಿದ್ದು, ಅಂದೇ ಅಧಿವೇಶನದಲ್ಲಿ ಹಣ ಬಿಡುಗಡೆ ಬಗ್ಗೆ ಪ್ರಕಟಿಸಲಿದ್ದಾರೆ.

# ಸಾಹಿತ್ಯವೇ ಭಾವನೆಗಳಿಗೆ ಜೀವ ತುಂಬುವ ಸಂಜೀವಿನಿ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಡೀನ್ ಟಿ.ಎಂ. ರಾಜಶೇಖರ್



ಹರಪನಹಳ್ಳಿ, ಡಿ.17 - ಸಾಹಿತ್ಯವೇ ಭಾವನೆಗಳಿಗೆ ಜೀವ ತುಂಬುವ ಸಾರ್ವಕಾಲಿಕ ಸಂಜೀವಿನಿ ಎಂದು ಟಿ.ಎಂ.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯದ ಡೀನ್ ಟಿ.ಎಂ. ರಾಜಶೇಖರ್ ತಿಳಿಸಿದರು.

ಪಟ್ಟಣದ ಟಿ.ಎಂ.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕರ್ಣ ಪ್ರಕಾಶನ ಹಾಗೂ ಟಿ.ಎಂ.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಗುರುಬಸವರಾಜ ಶಿವನಗೌಡ್ರು ಸ್ವರಚಿತ 'ಮನದ ಕಲ್ಪನೆ-ಕರದ ಕಾರ್ಯ' ಪುಸ್ತಕ ಲೋಕಾರ್ಪಣೆ ಗೊಳಿಸಿ ಮಾತನಾಡಿದರು.

ಬಿಡುವಿಲ್ಲದ ಕೆಲಸಗಳ ನಡುವೆಯೂ ತಮ್ಮ ಅನುಭವಗಳನ್ನು ಅನುಭಾವಗಳಾಗಿ ಪರಿವರ್ತಿಸಿ 'ಮನದ ಕಲ್ಪನೆ ಕರದ ಕಾರ್ಯ' ಎಂಬ ಕವನ ಸಂಕಲನ ರಚಿಸಿರುವುದು ಪ್ರಶಂಸನೀಯವಾಗಿದೆ ಎಂದರು.

ಕವನ ಸಂಕಲನದಲ್ಲಿ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯ ಋಣಾತ್ಮಕ ಪರಿಣಾಮವನ್ನು ಬಹು ಸೂಕ್ಷ್ಮವಾಗಿ ಉಲ್ಲೇಖಿಸಿರುವುದು, ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ಅವರ ಸಾಹಿತ್ಯಾಭಿರುಚಿ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ಕಸಾಪ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ ಮಾತನಾಡಿ, ಮೊಬೈಲ್ ಗೀಳಿಗೆ ಅಂಟಿಕೊಂಡ ವಿದ್ಯಾರ್ಥಿಗಳು, ಸಾಹಿತ್ಯದ ಕಡೆಗೆ ಹೆಚ್ಚಿನ ಒಲವು ತೋರಿಸಬೇಕಿದೆ. ಈ ನಿಟ್ಟಿನಲ್ಲಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ಹೊಸ-ಹೊಸ ಕೃತಿಗಳನ್ನು ರಚಿಸಲಿ ಎಂದು ಆಶಯ ವ್ಯಕ್ತಪಡಿಸಿದರು.

ಲೇಖಕ ಗುರುಬಸವರಾಜ ಶಿವನಗೌಡ್ರು ಮಾತನಾಡಿ, ಕನ್ನಡ ಸಾಹಿತ್ಯ ಲೋಕದಲ್ಲಿ ಹಲವು ರೀತಿಯ ವಿಶಿಷ್ಟತೆಗಳನ್ನು ಕಾಣಬಹುದು. ಕೆಲವೊಮ್ಮೆ ಹೊಸ ಪ್ರತಿಭೆಗಳಿಗೆ ಸಾಹಿತ್ಯದ ಜಾಡು ಅಥವಾ ಅಭಿರುಚಿಯನ್ನು ಪರಿಚಯಿಸುವುದು ಅವಶ್ಯಕವಾಗಿದೆ ಎಂದರು.

ಕಾಲೇಜಿನ ಪ್ರಾರ್ಚಾಯೆ ಡಾ.ಜಿ.ಎಂ ವಿಜಯಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕರಾದ ಸಿ.ಎಂ ವೀರೇಶ್, ಡಾ.ಎನ್.ಟಿ ಮರುಳಸಿದ್ದಪ್ಪ, ಕೆ.ಪಿ ಮೀನಾಕ್ಷಿ, ಸಾಹಿತಿ ಬಸವರಾಜ ಕರುವಿನ, ಮತ್ತಿಹಳ್ಳಿಯ ನಿಂಗನಗೌಡ್ರು, ಶಿವನಗೌಡ್ರು, ಭರತ್ ಭೂಷಣ್, ಕರಿಬಸಪ್ಪ ಇತರರು ಇದ್ದರು.

# ಲೋಕಸಭೆಯಲ್ಲಿ ಮಂಡನೆ

**(1ನೇ ಪುಟದಿಂದ)** ಅಮಿತ್ ಷಾ ಮಾತನಾಡಿ, ಮಸೂದೆಯನ್ನು ವ್ಯಾಪಕ ಚರ್ಚೆಗಾಗಿ ಜಂಟಿ ಸದನ ಸಮಿತಿಗೆ ವಹಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಒಲವು ತೋರಿದ್ದಾರೆ. ಮಸೂದೆಗಳ ಬಗ್ಗೆ ಎಲ್ಲ ಹಂತಗಳಲ್ಲಿ ಚರ್ಚೆಗಳು ನಡೆಯಬೇಕಿದೆ ಎಂದರು.

ಜಂಟಿ ಸದನ ಸಮಿತಿಯಲ್ಲಿ ವಿವರವಾದ ಚರ್ಚೆಗಳು ನಡೆಯಲಿವೆ. ಜಂಟಿ ಸದನ ಸಮಿತಿಯ ವರದಿಗೆ ಸಂಪುಟ ಒಪ್ಪಿಗೆ ನೀಡಲಿದೆ. ಆನಂತರ ಮತ್ತೆ ಸದನದಲ್ಲಿ ಈ ಮಸೂದೆಗಳ ಕುರಿತು ಚರ್ಚೆ ನಡೆಸಲಾಗುವುದು ಎಂದರು.

ಸಂಸತ್ತಿನ ಜಂಟಿ ಸಮಿತಿಗೆ ಈ ಮಸೂದೆಗಳನ್ನು ವಹಿಸಲು ನಿರ್ಣಯ ಮಂಡಿಸುವುದಾಗಿ ಮೆಘ್ವಾಲ್ ಹೇಳಿದರು. ಇದಕ್ಕೂ ಮುಂಚೆ ಮಸೂದೆಗಳ ಕುರಿತು ಮಾತನಾಡಲು ಆಡಳಿತಾರೂಢ ಸದಸ್ಯರಿಗೆ ಅವಕಾಶ ನೀಡಿದ್ದಕ್ಕೆ ಪ್ರತಿಪಕ್ಷಗಳು ಆಕ್ಷೇಪಿಸಿದವು.

ಇದಕ್ಕೆ ಉತ್ತರಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಎಲ್ಲ ಪಕ್ಷಗಳ ನಾಯಕರು ಮಸೂದೆಗಳ ಸಲ್ಲಿಕೆ ಬಗ್ಗೆ ಮಾತನಾಡಲು ಅವಕಾಶ ನೀಡಲಾಗಿದೆ. ನೀವೊಬ್ಬರೇ ಸಂಸತ್ತಿನ ಪ್ರತಿನಿಧಿಯಲ್ಲ, ಇಲ್ಲಿ ಎಲ್ಲ ಪಕ್ಷಗಳು ಪ್ರತಿನಿಧಿಸುತ್ತವೆ ಎಂದರು.

ಬಿಜೆಪಿ ಮಿತ್ರ ಪಕ್ಷಗಳಾದ ಟಿಡಿಪಿ ಹಾಗೂ ಶಿವ ಸೇನೆಗಳು ಮಸೂದೆಗಳಿಗೆ ಬೆಂಬಲಿಸುವುದಾಗಿ ತಿಳಿಸಿದವು.


**ಶಿಕ್ಷಕ - ಶಿಕ್ಷಕಿಯರು ಬೇಕಾಗಿದ್ದಾರೆ**

"ರಶ್ಮಿ" ಹೆಣ್ಣು ಮಕ್ಕಳ ಉಚಿತ ವಸತಿಯುತ
ಪ್ರಾಥಮಿಕ ಮತ್ತು ಪ್ರೌಢಶಾಲೆ, ದಾವಣಗೆರೆ.
ಕನ್ನಡ ಮಾಧ್ಯಮ ಶಾಲೆಯಲ್ಲಿ

B.A., B.Ed., BSc., B.Ed ವಿದ್ಯಾರ್ಹತೆಯುಳ್ಳ
ಶಿಕ್ಷಕ-ಶಿಕ್ಷಕಿಯರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.

**ಸಂಪರ್ಕಿಸಿ : 82771 67890**


# ಉಕ್ರೇನ್ ಸೈನ್ಯಕ್ಕೆ ದೇಣಿಗೆ ಕ್ಷೀಣ



ಕೀವ್, ಡಿ. 17 - ಉಕ್ರೇನ್‌ನಲ್ಲಿ ಸ್ವಯಂ ಪ್ರೇರಿತವಾಗಿ ಸೈನ್ಯಕ್ಕೆ ಹರಿದು ಬರುತ್ತಿದ್ದ ದೇಣಿಗೆ ಪ್ರಮಾಣ ಕಡಿಮೆಯಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಕಠಿಣವಾಗುತ್ತಿರುವ ಕಾರಣ, ಸೈನ್ಯದ ನೆರವು ಸಂಗ್ರಹಕ್ಕೆ ಸಮಸ್ಯೆಯಾಗುತ್ತಿದೆ.

ಗ್ರಾಸ್‌ರೂಟ್ಸ್ ಸೇರಿದಂತೆ ಹಲವು ಸಂಸ್ಥೆಗಳು 2014 ರಿಂದಲೇ ಉಕ್ರೇನ್ ಹೋರಾಟಗಾರರಿಗಾಗಿ ನಿಧಿ ಸಂಗ್ರಹಿಸುತ್ತಿದ್ದವು. ಆ ವೇಳೆ ಕ್ರಿಮಿಯಾ ಪ್ರದೇಶವನ್ನು ರಷ್ಯಾ ವಶಕ್ಕೆ ತೆಗೆದುಕೊಂಡಿತ್ತು ಹಾಗೂ ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳು ಪೂರ್ವ ಉಕ್ರೇನ್‌ನಲ್ಲಿ ಹೋರಾಟ ಆರಂಭಿಸಿದ್ದರು. ಅಂದಿನಿಂದಲೂ ಸೈನ್ಯಕ್ಕೆ ಸ್ವಯಂ ಪ್ರೇರಿತವಾಗಿ ಹಲವು ಸಂಘಟನೆಗಳು ಹಣ ಸಂಗ್ರಹಿಸುತ್ತಿವೆ.

ಆ ಸಮಯದಲ್ಲಿ ಉಕ್ರೇನ್ ಸೈನ್ಯದ ಜೊತೆಗೆ ಸ್ವಯಂ ಪ್ರೇರಿತ ಬೆಟಾಲಿಯನ್‌ಗಳೂ ಸಹ ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಿಗೆ ಸ್ವಯಂ ಹಣಕಾಸು ಕಂಡುಕೊಳ್ಳುವುದು ಮಹತ್ವದ್ದಾಗಿತ್ತು.

ರಷ್ಯಾ ವಿರುದ್ಧ ಸಮರ ತೀವ್ರಗೊಳ್ಳುತ್ತಿರುವಂತೆ ಹಣಕಾಸು ಸಮಸ್ಯೆಯೂ ಹೆಚ್ಚಾಗುತ್ತಿದೆ. ಸೈನ್ಯ ಎದುರಿಸುತ್ತಿರುವ ಹಣಕಾಸು ಕೊರತೆಯನ್ನು ನೀಗಿಸಲು ದೇಣಿಗೆ ನೀಡುವಂತೆ ಕೀವ್ ನಗರದ ರಸ್ತೆ ಬದಿಗಳಲ್ಲಿ ಭಿತ್ತಿ ಪತ್ರಗಳನ್ನು ಅಂಟಿಸಲಾಗಿದೆ. ಆದರೆ, ದೇಶದ ಆರ್ಥಿಕ ಪರಿಸ್ಥಿತಿ ಕಾರಣದಿಂದಾಗಿ ವೈಯಕ್ತಿಕ ದೇಣಿಗೆ ಪ್ರಮಾಣ ಕಡಿಮೆಯಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಗ್ರಾಸ್‌ರೂಟ್ಸ್ ಸಂಘಟನೆಯು ಸಂಗೀತ ಗೋಷ್ಠಿ ಆಯೋಜಿಸುವ ಮೂಲಕ ಸೈನ್ಯಕ್ಕೆ ನಿಧಿ ಸಂಗ್ರಹಿಸುವ ಯೋಜನೆಗೆ ಕೈ ಹಾಕಿದೆ. 12 ಲಕ್ಷ ಡಾಲರ್ ಸಂಗ್ರಹಿಸಿ ಸೈನ್ಯಕ್ಕೆ ಶಸ್ತ್ರಗಳನ್ನು ಒದಗಿಸಲು ಈ ಸಂಘಟನೆ ಉದ್ದೇಶಿಸಿದೆ.

ಅಮೆರಿಕಾದ ಅಧ್ಯಕ್ಷ ಜೋ ಬಿಡೆನ್ ಅವರು ಉಕ್ರೇನ್‌ಗೆ ಶತಕೋಟಿಗಳ ಡಾಲರ್ ನೆರವು ಒದಗಿಸಿದ್ದರು. ಮುಂದಿನ ತಿಂಗಳು ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದ ನಂತರ ಉಕ್ರೇನ್‌ಗೆ ಇದೇ ರೀತಿಯ ಬೆಂಬಲ ದೊರೆಯುವುದು ಅನುಮಾನವಾಗಿದೆ.

ಯುದ್ಧ ಆರಂಭವಾದ ಮೊದಲ ಸಾವಿರ ದಿನಗಳಲ್ಲಿ ಸುಮಾರು 1 ಕೋಟಿ ಜನರು 1.8 ಶತಕೋಟಿ ಡಾಲರ್ ದೇಣಿಗೆ ನೀಡಿದ್ದರು ಎಂದು ಮೋನೋಬ್ಯಾಂಕ್ ತಿಳಿಸಿದೆ. ಮೋನೋಬ್ಯಾಂಕ್ ಸೈನಿಕ ದೇಣಿಗೆ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆದರೆ ಪೂರ್ಣ ಪ್ರಮಾಣದ ಯುದ್ಧ ಆರಂಭವಾದ ಒಂದು ವರ್ಷದ ನಂತರ ದೇಣಿಗೆ ಸಂಗ್ರಹಿಸುವುದು ಕಠಿಣವಾಗುತ್ತಿದೆ ಎಂದು ಕೆಲ ಸಂಘಟನೆಗಳು ತಿಳಿಸಿವೆ. ಸೈನ್ಯದ ಕಾರ್ಯಗಳಿಗೆ ನೆರವಾಗುವ ಕಮ್ ಬ್ಯಾಕ್ ಅಲೈವ್ ಸಂಘಟನೆಯು ಮೊದಲ ವರ್ಷ 184 ದಶಲಕ್ಷ ಡಾಲರ್ ದೇಣಿಗೆ ಸಂಗ್ರಹಿಸಿತ್ತು. ಆದರೆ 2024ರಲ್ಲಿ ಇದುವರೆಗೆ 89 ದಶಲಕ್ಷ ಡಾಲರ್ ಸಂಗ್ರಹಿಸಲು ಮಾತ್ರ ಸಾಧ್ಯವಾಗಿದೆ.

ಹಲವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇದರಿಂದಾಗಿ ಸೈನ್ಯಕ್ಕೆ ಬೆಂಬಲ ನೀಡುವ ಸಾಮರ್ಥ್ಯ ಕಡಿಮೆಯಾಗಿದೆ ಎಂದು ಕಮ್ ಬ್ಯಾಕ್ ಅಲೈವ್ ಫೌಂಡೇಷನ್ ಉಪನಿರ್ದೇಶಕ ಲೇವ್ ಕಾರ್ಪೆಂಕೋ ತಿಳಿಸಿದ್ದಾರೆ.

3 ವರ್ಷದ ಸಮರದ ಕಾರಣದಿಂದ ಉಕ್ರೇನ್ ಆರ್ಥಿಕತೆಗೆ ತೀವ್ರ ಹಾನಿಯಾಗಿದೆ. ವಿಶ್ವಬ್ಯಾಂಕ್ ಕಳೆದ ಮೇ ತಿಂಗಳಲ್ಲಿ ಬಿಡುಗಡೆ ಮಾಡಿದ ವರದಿಯ ಪ್ರಕಾರ 2020ರ ನಂತರ ಉಕ್ರೇನ್‌ನಲ್ಲಿ ಬಡವರ ಪ್ರಮಾಣ 1.8 ದಶಲಕ್ಷ ಹೆಚ್ಚಾಗಿ 9 ದಶಲಕ್ಷಕ್ಕೆ ತಲುಪಿದೆ. ಒಟ್ಟು ಜನಸಂಖ್ಯೆಯ ಶೇ. 29ರಷ್ಟು ಜನ ಈಗ ಬಡತನಕ್ಕೆ ಸಿಲುಕಿದ್ದಾರೆ.

ಬಡವರಿಗೆ ನೆರವಾಗುವ ಸಲುವಾಗಿ ಸರ್ಕಾರ ಚಳಿಗಾಲದ ಯೋಜನೆಯನ್ನು ಆರಂಭಿಸಿದೆ. ಡಿಸೆಂಬರ್‌ನಲ್ಲಿ ಈ ಯೋಜನೆ ಆರಂಭಿಸಿದ ಕೆಲವೇ ದಿನಗಳಲ್ಲಿ 6.5 ದಶಲಕ್ಷ ಜನರು ನೆರವಿಗಾಗಿ ಅರ್ಜಿ ದಾಖಲಿಸಿದ್ದಾರೆ.

ದೇಣಿಗೆ ಮಟ್ಟ ಹೆಚ್ಚಿಸುವಲ್ಲಿ ಅಂತರರಾಷ್ಟ್ರೀಯ ನೆರವು ಸಹ ಪ್ರಾಮುಖ್ಯತೆ ಪಡೆದುಕೊಂಡಿದೆ. ಅಂತರರಾಷ್ಟ್ರೀಯ ಸಹಭಾಗಿಗಳ ನೆರವು ಕಡಿಮೆಯಾದಾಗ ಅದು ಉಕ್ರೇನ್ ಸಮಾಜದ ಸ್ಥೈರ್ಯದ ಮೇಲೂ ಪರಿಣಾಮ ಬೀರುತ್ತದೆ. ಸ್ಥಳೀಯ ಜನರೂ ಸಹ ದೇಣಿಗೆ ನೀಡುವ ಉತ್ಸಾಹ ಕಳೆದುಕೊಳ್ಳಬಹುದು ಎಂದು ಕಾರ್ಪೆಂಕೋ ಹೇಳಿದ್ದಾರೆ.

# ಎನ್.ಟಿ.ಎ. ದಿಂದ ಕೇವಲ ಉನ್ನತ ಶಿಕ್ಷಣ ಪ್ರವೇಶ ಪರೀಕ್ಷೆ

**(1ನೇ ಪುಟದಿಂದ)** ಎದುರಾಗಿರುವ ಹಿನ್ನೆಲೆಯಲ್ಲಿ ಉನ್ನತ ಹಂತದ ಸಮಿತಿಯೊಂದನ್ನು ರಚಿಸಲಾಗಿತ್ತು. ಸಮಿತಿ ನೀಡಿರುವ ಶಿಫಾರಸ್ಸು ಆಧರಿಸಿ, ಈ ಕ್ರಮ ತೆಗೆದುಕೊಳ್ಳಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಕೇವಲ ಉನ್ನತ ಶಿಕ್ಷಣದ ಪ್ರವೇಶ ನಡೆಸುವ ಬಗ್ಗೆ ಗಮನ ಕೇಂದ್ರೀಕರಿಸಲಿದೆ. ಮುಂದಿನ ವರ್ಷದಿಂದ ಯಾವುದೇ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದಿಲ್ಲ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಪ್ರಧಾನ್ ಹೇಳಿದ್ದಾರೆ.

ವಿಶ್ವವಿದ್ಯಾಲಯಗಳ ಪ್ರವೇಶಕ್ಕಾಗಿ ನಡೆಸುವ ಸಿಯುಇಟಿ-ಯುಜಿ ಪರೀಕ್ಷೆಯನ್ನು ವರ್ಷಕ್ಕೆ ಒಮ್ಮೆ ಮಾತ್ರ ನಡೆಸಲಾಗುವುದು ಎಂದವರು ಸ್ಪಷ್ಟಪಡಿಸಿದ್ದಾರೆ.


**ಸಾರ್ವಜನಿಕ ಪ್ರಕಟಣೆ**

ನಮ್ಮ ಪಕ್ಷಗಾರರಾದ ಮಂಜುನಾಥ ಬಿನ್ ಲೇಟ್ ಈಶ್ವರಪ್ಪ, ತೋಳಹುಣಸೆ ಗ್ರಾಮ, ತಾ: ದಾವಣಗೆರೆ ಇವರು ನೀಡಿದ ಅಧಿಕಾರ ಮತ್ತು ಮಾಹಿತಿ ಮೇರೆಗೆ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ನಮ್ಮ ಪಕ್ಷಗಾರರು ದಾವಣಗೆರೆ ನಗರದ ಡೋರ್ ನಂ.313/2, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆಯಲ್ಲಿ ವಾಸವಾಗಿರುವ ಶ್ರೀಶೈಲ ಪಿ. ವಿಜಯಾಪುರ ತಂದೆ ಲೇಟ್ ಪ್ರಭುಸ್ವಾಮಿ ಇವರೊಂದಿಗೆ ಅನುಸೂಚಿಯಲ್ಲಿರುವ ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳಲು ನಿರ್ಧಸಿರಿಸುತ್ತಾರೆ. ಸದರಿ ಅನುಸೂಚಿ ಸರ್ವೆ ನಂಬರು ಈ ಹಿಂದೆ ನಾಗರಾಜಪ್ಪ ಬಿನ್ ರುದ್ರಪ್ಪ ಇವರಿಗೆ ಪಾಲುವಿಭಾಗ ಪತ್ರದ ಪ್ರಕಾರ 277/2 ಆಗಿದ್ದು, ಆ ನಂತರ 277/ಬಿ4 ಆದ ಮೇಲೆ ದಿನಾಂಕ :13.03.2019 ರಂದು ಶ್ರೀಶೈಲ ಪಿ. ವಿಜಯಾಪುರರವರು ಕ್ರಯಕ್ಕೆ ತೆಗೆದುಕೊಂಡ ಮೇಲೆ ಈಗ ಹಾಲಿ ಅನುಸೂಚಿಯಲ್ಲಿ ನಮೂದಿಸಿದಂತೆ ಇರುತ್ತದೆ. ಸದರಿ ಆಸ್ತಿಗೆ ಅವರ ವಾರಸುದಾರರಾಗಲೀ ಅಥವಾ ಸದರಿ ಜಮೀನಿಗೆ ಸಂಬಂಧಪಟ್ಟಂತೆ ಹಕ್ಕು, ಹಿತ ಸಂಬಂಧ ಹೊಂದಿದವರಾಗಲೀ ಈ ಪ್ರಕಟಣೆಯಾದ 15 ದಿನದೊಳಗೆ ತಮ್ಮಗಳ ತಕರಾರುಗಳನ್ನು ನಮ್ಮ ಪಕ್ಷಗಾರರಿಗಾಗಲೀ ಅಥವಾ ಅವರ ವಕೀಲರಿಗಾಗಲೀ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದು ತಂಟೆ ತಕರಾರು ಇರುವುದಿಲ್ಲ ಅಂತ ಪರಿಗಣಿಸಿ, ಶುದ್ಧ ಕ್ರಯ ಪತ್ರವನ್ನು ಮಾಡಿಕೊಳ್ಳುತ್ತಾರೆ ತಿಳಿಯಿರಿ ಅಂತ ನೀಡಿದ ಸಾರ್ವಜನಿಕ ಪ್ರಕಟಣೆ.

**ಅನುಸೂಚಿ :**

ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಹಿರೇಮೇಗಳಗೆರೆ ಗ್ರಾಮದ ರಿ.ಸ.ನಂ:277/2 ಪೈಕಿ ವಿಸ್ತೀರ್ಣ 1-ಎಕರೆ, 74-ಸೆಂಟ್ಸ್ ಆಕಾರ 0-32 ಪೈಸೆ ವುಳ್ಳ ಜಮೀನಿಗೆ **ಚೆಕ್ಕುಬಂದಿ : ಪೂರ್ವಕ್ಕೆ :** ಲಕ್ಕಮ್ಮ ಇವರ ಜಮೀನು, **ಪಶ್ಚಿಮಕ್ಕೆ :** ಗ್ರಾಮೀಣ ರಸ್ತೆ, **ಉತ್ತರಕ್ಕೆ :** ಶಾಂತಮ್ಮ ಇವರ ಜಮೀನು, **ದಕ್ಷಿಣಕ್ಕೆ :** ಗುಡ್ಡನಾಗಪ್ಪರ ಹಾಲಪ್ಪನವರ ಜಮೀನು.

ದಿನಾಂಕ : 17.12.2024
ಸ್ಥಳ: ದಾವಣಗೆರೆ

**ಪಿ. ವೈ. ಹಾದಿಮನಿ,**
ವಕೀಲರು, ಲಾಳಿ ತಿಮ್ಮಪ್ಪ ಕಾಂಪ್ಲೆಕ್ಸ್,
ಹೊಸಕೋರ್ಟ್ ಎದುರು, ದಾವಣಗೆರೆ.

## ಜಿಗಳಿ : ನಾಳೆ ಬೀರಪ್ಪನ ಕಾರ್ತಿಕೋತ್ಸವ, ನಾಡಿದ್ದು ಸಾಮೂಹಿಕ ವಿವಾಹ, ದೊಡ್ಡಎಡೆ



ಮಲೇಬೆನ್ನೂರು, ಡಿ.17- ಜಿಗಳಿ ಗ್ರಾಮದ ಒಂಭತ್ತು ಕಟ್ಟೆಯ ಒಡೆಯನಾದ ಶ್ರೀ ಬೀರಲಿಂಘೇಶ್ವರ ಸ್ವಾಮಿಯ ಮಹಾಕಾರ್ತಿಕೋತ್ಸವ ಮತ್ತು ದೊಡ್ಡ ಎಡೆ ಜಾತ್ರೆ, ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ನಡೆಸಲು ನಾಡಿದ್ದು ದಿನಾಂಕ 19 ಮತ್ತು 20 ರಂದು ಹಮ್ಮಿಕೊಳ್ಳಲಾಗಿದೆ.

ದಿನಾಂಕ 19ರ ಗುರುವಾರ ರಾತ್ರಿ 9 ಗಂಟೆಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಭಜನೆ, ಡೊಳ್ಳು ಮತ್ತು ಈರಗಾರರ ಕುಣಿತದೊಂದಿಗೆ ಬಹು ವಿಜೃಂಭಣೆಯಿಂದ ಜರುಗಲಿದೆ.

ದಿನಾಂಕ 20ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಜವಳ, 9.30 ರಿಂದ 10.30ರವರೆಗೆ ಸಲ್ಲುವ ಶುಭ ಲಗ್ನದಲ್ಲಿ ಸಾಮೂಹಿಕ ವಿವಾಹ, ಬಳಿಕ ದೊಡ್ಡ ಎಡೆ ಪೂಜೆ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಮತ್ತು ರಟ್ಟಿಹಳ್ಳಿ ಕಬ್ಬಿಣ ಕಂಠಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

# 1 ಗಂಟೆವರೆಗೆ ನಡೆದ ಕಲಾಪ

**(1ನೇ ಪುಟದಿಂದ)** ವರೆಗೂ ಅಂದರೆ, ಸತತ 15 ಗಂಟೆಗಳ ಕಾಲ ನಡೆಯಿತು.

ಸಭಾಧ್ಯಕ್ಷ ಯು.ಟಿ.ಖಾದರ್, ಇದು ದಾಖಲೆಯ ಕಲಾಪವಾಗಿದ್ದು, ಈ ಅವಧಿಯಲ್ಲಿ ವಿವಿಧ ವಿಷಯಗಳ ಚರ್ಚೆ ಜೊತೆಗೆ 8 ವಿಧೇಯಕಗಳ ಅಂಗೀಕಾರ ಮಾಡಲಾಗಿದೆ ಎಂದರು.

ರಾತ್ರಿ 11 ಗಂಟೆ ವೇಳೆ ಸಚಿವ ಕೃಷ್ಣಭೈರೇಗೌಡ, ಸಭಾಧ್ಯಕ್ಷರೇ ಬೆಳಗ್ಗೆವರೆಗೆ ಕಲಾಪ ನಡೆಸೋಣ ನಿಮ್ಮ ಅವಧಿಯಲ್ಲಿ ದಾಖಲೆ ನಿರ್ಮಾಣವಾಗಲಿ ಎಂದಾಗ, 'ನಾನು ಸಿದ್ಧನಿದ್ದೇನೆ' ಎಂದು ನಗುತ್ತಲೇ ಕಲಾಪ ಮುಂದುವರೆಸಿದರು.

ಕೆಲವು ಸದಸ್ಯರು ಮಾತನಾಡಲು ಅವಕಾಶ ಕೊಡಿ ಸಮಯವಾಯಿತು ಎಂದು ಒತ್ತಾಯಿಸಿದಾಗ, ಖಾದರ್ ಅವರು, ವಿಶ್ವಕಪ್ ಕ್ರಿಕೆಟ್‌ಗಾಗಿ ತಡರಾತ್ರಿ 3 ಗಂಟೆಯವರೆಗೂ ಕಾಯುವುದಿಲ್ಲವೇ, ಅದೇ ರೀತಿ ಭಾವಿಸಿ ಸಹಕಾರ ಕೊಡಿ ಎಂದರು.

ಸಚಿವ ಸತೀಶ್ ಜಾರಕಿಹೊಳಿ ಕೂಡಾ ಇದೊಂದು ವಿಶೇಷ ಘಳಿಗೆ ಎಂದು ಬಣ್ಣಿಸಿದರು.

ರಾಯಚೂರಿನ ದೇವದುರ್ಗದ ಜೆಡಿಎಸ್ ಶಾಸಕಿ ಕರೆಮ್ಮ ನಾಯ್ಕ್ ಮಧ್ಯಾರಾತ್ರಿಯಾದರೂ ಕಲಾಪದಲ್ಲಿ ಭಾಗವಹಿಸಿ, ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಪಡೆಯಲು ಅವರು ಹಾಜರಿದ್ದರು.

ಇಂಡಿ ಶಾಸಕ ಯಶವಂತರಾಯ ಗೌಡ ತಮ್ಮ ಸರದಿ ಬಂದಾಗ, ಮೊದಲು ಕರೆಮ್ಮ ಅವರು ಬಹಳ ಹೊತ್ತಿನಿಂದ ಕಾಯುತ್ತಿದ್ದಾರೆ, ಅವರಿಗೆ ಮೊದಲು ಉತ್ತರ ಕೊಡಿ, ನಂತರ ತೊಗರಿ ಬೆಳೆಹಾನಿಗೆ ಪರಿಹಾರ ನೀಡುವಂತೆ ಮನವಿ ಮಾಡಿದರು.

ಕೃಷ್ಣನಾಯ್ಕ್, ನಾರಾ ಭರತ್ ರೆಡ್ಡಿ, ಕೋನರೆಡ್ಡಿ, ಸದನದಲ್ಲಿ ಹಾಜರಿದ್ದು ಉತ್ತರ ಪಡೆದರು. ಇನ್ನು ಕಾಂಗ್ರೆಸ್ ಸದಸ್ಯ ಎ.ಆರ್.ಕೃಷ್ಣಮೂರ್ತಿ ತಡರಾತ್ರಿ 1 ಗಂಟೆಗೆ ಗಮನ ಸೆಳೆಯುವ ಸೂಚನೆ ಮಂಡಿಸಿ ಉತ್ತರ ಪಡೆದುಕೊಂಡರು.

ಕಲಾಪ ಮುಂದೂಡುವ ವೇಳೆಗೆ ಸ್ಪೀಕರ್, ಡೆಪ್ಯುಟಿ ಸ್ಪೀಕರ್, ಮೂವರು ಸಚಿವರು, 7 ಕಾಂಗ್ರೆಸ್ ಶಾಸಕರು, ಜೆಡಿಎಸ್‌ನ 4 ಶಾಸಕರು, ಬಿಜೆಪಿ ಒಬ್ಬರು ಶಾಸಕರು ಹಾಗೂ ಒಬ್ಬರು ಪಕ್ಷೇತರ ಶಾಸಕರು ಉಪಸ್ಥಿತರಿದ್ದರು.

ಬೆಳಗಾವಿ ಅಧಿವೇಶನ ಹತ್ತು ದಿನಗಳಿಗೆ ನಿಗದಿಯಾಗಿತ್ತಾದರೂ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ 9 ದಿನಕ್ಕೆ ಇಳಿಸಲಾಯಿತು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದಿಂದ ಮಂಗಳ ವಾರ ಸಂತಾಪ ಸೂಚನೆ ಹಾಗೂ ಬುಧವಾರ ಸರ್ಕಾರಿ ರಜೆ ಘೋಷಣೆ ಘೋಷಿಸಿದ್ದರಿಂದ ಅಧಿವೇಶನದ ಅವಧಿ 7 ದಿನಕ್ಕೆ ಇಳಿಕೆಯಾಗಿತ್ತು.

ಸದನದ ಮುಂದಿರುವ ವಿಷಯಗಳನ್ನು ಮುಗಿಸುವ ದೃಷ್ಟಿಯಿಂದ ಕಲಾಪದ ಅವಧಿಯನ್ನು ಹೆಚ್ಚಿಸಲಾಗಿದ್ದು, ವಿಧಾನಮಂಡಲ ಅಧಿವೇಶನ ಡಿಸೆಂಬರ್ 19 ರವರೆಗೆ ನಡೆಯಲಿದೆ.

# ಜಗಳೂರಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋಗೆ ಆಗ್ರಹಿಸಿ ಪಾದಯಾತ್ರೆ



ಜಗಳೂರು, ಡಿ. 17 - ಕೆಎಸ್‌ಆರ್‌ಟಿಸಿ ಡಿಪೋ ಸ್ಥಾಪಿಸಲು ಒತ್ತಾಯಿಸಿ 'ಪಾದಯಾತ್ರೆಗೆ' ಬೆಂಬಲಿಸಿ ಪ್ರಗತಿ ಪರ ಸಂಘಟನೆಗಳ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು, ಮಹಾತ್ಮಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರಮುಖ ಬೀದಿಗಳ ಮೂಲಕ ಅಂಬೇಡ್ಕರ್ ವೃತ್ತದ ಮುಂಭಾಗ ಜಮಾಯಿಸಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿ ನಂತರ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.

ರೈತ ಸಂಘಟನೆ ಹಿರಿಯ ಮುಖಂಡ ಬಸವರಾಜಪ್ಪ ಗಡಿಮಾಕುಂಟೆ, ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿ, ತಾಲ್ಲೂಕಿನಲ್ಲಿ ವಿದ್ಯಾರ್ಥಿ ಯುವಜನ, ಮಹಿಳೆ, ದಲಿತಪರ ಹಾಗೂ ರೈತ ಸಂಘಟನೆಗಳು ದಶಕಗಳ ಕಾಲ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸ್ಥಾಪನೆಗೆ ನಿರಂತರ ಹೋರಾಟ ನಡೆಸುತ್ತಾ ಬಂದಿವೆ. ಆದರೆ ಕಳೆದ ಆಡಳಿತ ಸರ್ಕಾರಗಳು ಜಾಗ ನಿಗದಿಪಡಿಸುವ ಮೂಲಕ ಭರವಸೆಯೊಂದಿಗೆ ಹೋರಾಟಗಾರರ ಮೂಗಿಗೆ ತುಪ್ಪ ಹಚ್ಚಿವೆ ಎಂದು ಆರೋಪಿಸಿದರು.

ತಾಲ್ಲೂಕಿನಲ್ಲಿ ಬಡ ಕೂಲಿ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿದ್ದು, ತಮ್ಮ ಮಕ್ಕಳ ಶಿಕ್ಷಣಕ್ಕೆ ಹಣ ಭರಿಸುವುದಲ್ಲದೆ ಸರ್ಕಾರಿ ಬಸ್ ಗಳಿಲ್ಲದೆ ಖಾಸಗಿ ಬಸ್, ಆಟೋ, ಗೂಡ್ಸ್ ವಾಹನಗಳಲ್ಲಿ ಸಂಚರಿಸಲು ಆರ್ಥಿಕ ಹೊರೆಯಾಗುತ್ತಿದೆ. ಕೂಡಲೇ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸ್ಥಾಪಿಸಬೇಕು. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಬಸ್ ಬಿಡಬೇಕು ಎಂದು ಆಗ್ರಹಿಸಿದರು.

ಪ್ರಗತಿಪರ ಹೋರಾಟಗಾರರಾದ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಮಹಾಲಿಂಗಪ್ಪ ಎಚ್.ಎಂ. ಹೊಳೆ, ವಕೀಲ ಆರ್. ಓಬಳೇಶ್, ಸತೀಶ್ ಮಲೆಮಾಚಿಕೆರೆ, ರಾಜಪ್ಪ ವ್ಯಾಸಗೊಂಡನಹಳ್ಳಿ, ಧನ್ಯಕುಮಾರ್, ಎಚ್.ಎಂ. ಹೊಳೆ, ಬರ್ಕತ್ ಅಲಿ, ಮಾದಿಹಳ್ಳಿ ಮಂಜುನಾಥ್, ನಾಗರಾಜ್, ಮಲ್ಲಿಕಾರ್ಜುನ್, ಅನಂತರಾಜ್, ವಕೀಲ ಅಂಜಿನಪ್ಪ, ಸತ್ಯಮೂರ್ತಿ, ಪೂಜಾರ ಸಿದ್ದಪ್ಪ, ಪ.ಪಂ ಸದಸ್ಯ ಲುಕ್ಮಾನ್ ಖಾನ್, ಕುಬೇರಪ್ಪ, ಪಲ್ಲಾಗಟ್ಟೆ ಸುಧಾ, ಓಬಣ್ಣ, ಚೌಡಮ್ಮ, ಶಾಹಿನಾ ಬೇಗಂ, ವಕೀಲ ಅಂಜಿನಪ್ಪ, ಪ್ರವೀಣ್, ಚಿರಂಜೀವಿ ಈ ಸಂದರ್ಭದಲ್ಲಿದ್ದರು.

# ಶಿಕ್ಷಣದಿಂದ ಮಹಿಳೆಯರ ಜೀವನ ಸದೃಢ

**(1ನೇ ಪುಟದಿಂದ)** ಪ್ರಗತಿಯ ಹಾದಿಯಲ್ಲಿ ಸಾಗುತ್ತಿರುವ ಕಾರಣದಿಂದಾಗಿ, ಮಹಿಳೆಯರು ಎಲ್ಲಾ ರಂಗಗಳಲ್ಲಿ ತಮ್ಮದೇ ಆದಂತಹ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಸಮಾಜದಲ್ಲಿ ಉನ್ನತ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸುತ್ತಾ ಸಾಗಿರುವುದರಿಂದ ಮಹಿಳೆಯರ ಬಗ್ಗೆ ಇದ್ದಂತಹ ತಾತ್ಸಾರ ಮನೋಭಾವ ತನ್ನಿಂದ ತಾನೇ ಕಡಿಮೆ ಆಗುತ್ತಾ ಸಾಗಿದೆ. ಇದಕ್ಕೆ ಕಾರಣ ಮಹಿಳೆಯರಿಗೆ ಪೋಷಕರು ನೀಡುತ್ತಿರುವ ವಿದ್ಯಾಭ್ಯಾಸ ಕಾರಣವಾಗಿದೆ. ಮಹಿಳೆಯರು ಶಿಕ್ಷಣ ಪಡೆದರೆ ಜೀವನವನ್ನು ಸದೃಢ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಹಕಾರಿಯಾಗುತ್ತದೆ ಎಂದು ಪ್ರತಿಪಾದಿಸಿದರು.

ದೇಶದೆಲ್ಲೆಡೆ ತಂತ್ರಜ್ಞಾನ ಹಾಗೂ ಸಾಮಾಜಿಕ ಜಾಲತಾಣ ಹೆಚ್ಚು ಆದಂತೆ ಸೈಬರ್ ಕ್ರೈಂಗಳು ಹೆಚ್ಚಾಗುತ್ತಿದ್ದು, ಶಿಕ್ಷಣ ವಂಚಿತ ಮಹಿಳೆಯರೇ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಮಹಿಳೆಯರು ಅಪರಿಚಿತ ವ್ಯಕ್ತಿಗಳೊಂದಿಗೆ ವ್ಯವಹಾರ ಮಾಡುವಾಗ ಬಹಳಷ್ಟು ಎಚ್ಚರಿಕೆಯಿಂದ ಇರುವಂತೆ ಮತ್ತು ನಿಮಗೆ ಸಮಸ್ಯೆಗಳು ಎದುರಾದರೆ ಪೊಲೀಸ್ ಇಲಾಖೆಯ 112 ವಾಹನಕ್ಕೆ ಕರೆ ಮಾಡಿದಾಗ ತಕ್ಷಣವೇ ನಿಮ್ಮ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಲಾಗುತ್ತದೆ ಎಂದು ತಿಳಿಸಿದರು.

ಸರ್ಕಾರ ಮಹಿಳೆಯರಿಗೆ ಆತ್ಮಸ್ಥೈರ್ಯ ನೀಡುವ ಉದ್ದೇಶದಿಂದ ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮವು ಪ್ರತಿ ವರ್ಷ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ, ಅಪರಾಧ ತಡೆ ಮಾಸಾಚರಣೆ ಹೆಸರಿನಲ್ಲಿ ಒಂದು ತಿಂಗಳ ಕಾಲ ಆಯೋಜಿಸಲಾಗುತ್ತಿದೆ. ಇದರಲ್ಲಿ ಪ್ರಮುಖವಾಗಿ ಕಾನೂನಿನ ಅರಿವಿಲ್ಲದ ಮಹಿಳೆಯರ ರಕ್ಷಣೆಗೆ ಮತ್ತು ಅವರಿಗೆ ಕಾನೂನಿನ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಮಹಿಳೆಯರು ತಮಗೆ ಕಿರುಕುಳ ದೌರ್ಜನ್ಯ ನಡೆದಾಗ ಕೂಡಲೇ ನಿಮ್ಮ ಹತ್ತಿರದ ಯಾವುದೇ ಪೋಲಿಸ್ ಠಾಣೆಗೆ ಧಾವಿಸಿ ದೂರನ್ನು ದಾಖಲಿಸಬಹುದಾಗಿದೆ. ಜನಸ್ನೇಹಿಯಾದ ಪೊಲೀಸ್ ಠಾಣೆಗಳು ನಿಮಗೆ ನ್ಯಾಯವನ್ನು ಒದಗಿಸುವುದಕ್ಕಾಗಿ 24 ಗಂಟೆಗಳು ನಿಮಗಾಗಿ ತೆರೆದಿರುತ್ತದೆ ಎಂದು ಹೇಳಿದರು.

ವಿಜಯಲಕ್ಷ್ಮಿ ಮಾತನಾಡಿ, ಹಿಂದಿನ ದಿನಗಳಲ್ಲಿ ಕೂಡು ಕುಟುಂಬಗಳಿದ್ದವು. ಆದರೆ ಇಂದಿನ ದಿನಗಳಲ್ಲಿ ಒಂಟಿ ಕುಟುಂಬಗಳ ಸಂಖ್ಯೆ ಹೆಚ್ಚಾಗಿ, ಚಿಕ್ಕಪುಟ್ಟ ಸಮಸ್ಯೆಗಳೇ ನ್ಯಾಯಾಲಯದ ತನಕ ಹೋಗುತ್ತಿವೆ. ಇದರ ಬಗ್ಗೆ ಮಹಿಳೆಯರು ಜಾಗೃತಿ ವಹಿಸಬೇಕು. ಮಹಿಳೆ ಸಾಧನೆ ಮಾಡಲು ಮನಸ್ಸು ಮಾಡಿದರೆ ಸಾಕಷ್ಟು ಸಾಧನೆ ಮಾಡಬಲ್ಲರು, ರಾಜ್ಯದಲ್ಲಿ ಕೃಷಿ ಆಧಾರಿತ ಮಹಿಳೆಯರೇ ಹೆಚ್ಚಾಗಿರುವುದು ಕಾಣಬಹುದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜಾನಾಯ್ಕ, ಹರಿಹರ ವೃತ್ತ ನಿರೀಕ್ಷಕ ಎಸ್.ದೇವಾನಂದ್, ಸಮನ್ವಯ ಟ್ರಸ್ಟ್ ನ ಸುಮಂಗಲ, ಪ್ರಗತಿಪರ ರೈತ ವೀರೇಶ್ ಸಜ್ಜನ, ನಬಾರ್ಡ್‌ನ ರಶ್ಮಿ, ಸಿಡಿಪಿಓ ಪೂರ್ಣಿಮಾ, ಪ್ರಮೀಳಾ ಇತರರು ಹಾಜರಿದ್ದರು.

# ದೇವರಬೆಳಕೆರೆಯಲ್ಲಿ ವಿಶ್ವ ಏಡ್ಸ್ ದಿನಾಚರಣೆ



ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿ, ಪುರುಷ ಸಂತಾನ ಹರಣ ಶಸ್ತ್ರಚಿಕಿತ್ಸೆಯ ಪಾಕ್ಷಿಕ ಕಾರ್ಯಕ್ರಮ ಹಾಗೂ ಕುಟುಂಬ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಮಲೇಬೆನ್ನೂರು, ಡಿ, 17 - ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಹಾಗೂ ಪುರುಷ ಸಂತಾನ ಹರಣ ಪಾಕ್ಷಿಕ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ನವ್ಯ ಅವರು, ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದ ಹೆಚ್‌ಐವಿ ಏಡ್ಸ್ ಕಾಯಿಲೆ ಹರಡುತ್ತಿದ್ದು, ಸಂಸ್ಕರಿಸದೇ ಬಳಸುವ ಯಾವುದೇ ಸೂಜಿ, ಬ್ಲೇಡ್‌ಗಳಿಂದ ಜಾಗ್ರತೆ ವಹಿಸಬೇಕು. ರಕ್ತದಾನ ಮಾಡುವಾಗ ಮತ್ತು ರಕ್ತ ಪಡೆಯುವಾಗ ಜಾಗ್ರತೆ ವಹಿಸಬೇಕೆಂದು ತಿಳಿಸಿದರು.

ಯಾವುದೇ ಹೊಲಿಗೆ ಗಾಯ ಇಲ್ಲದ ಚಿಕಿತ್ಸೆ ಈ ಒಂದು ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಎಂದು ತಿಳಿಸಿದರು. ರಕ್ತಹೀನತೆ ಹಾಗೂ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವಂತಹ ಸ್ತ್ರೀಯರು ತಮ್ಮ ಗಂಡಂದಿರಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿಸುವುದು ಉತ್ತಮ ಎಂದು ಉಮ್ಮಣ್ಣ ತಿಳಿಸಿದರು.

ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಬಿ. ಆದರ್ಶ ಕಾರ್ಯಕ್ರಮ ನಿರೂಪಿಸಿದರು. ಆರೋಗ್ಯ ಕೇಂದ್ರದ ಶ್ರೀಮತಿ ಸಬಿತಮ್ಮ, ಮಹಮದ್ ಇಮ್ರಾನ್, ನಯನ, ರೇಖಾ, ಅಕ್ಷತಾ, ಪೂಜಾ, ಲಕ್ಷ್ಮಿದೇವಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಕುಮಾರಸ್ವಾಮಿ ಹುಟ್ಟುಹಬ್ಬ : ಮಕ್ಕಳಿಗೆ ಹಣ್ಣು ವಿತರಣೆ



ದಾವಣಗೆರೆ, ಡಿ. 17- ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕಾ ಮತ್ತು ಉಕ್ಕಿನ ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹುಟ್ಟು ಹಬ್ಬದ ಪ್ರಯುಕ್ತ ನಗರದ ವಿರಕ್ತ ಮಠದ ಶಾಲಾ ಮಕ್ಕಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ. ಕಾರ್ಯದರ್ಶಿ ಗಣೇಶ್ ದಾಸಕರಿಯಪ್ಪ, ಪ್ರಧಾನ ಕಾರ್ಯದರ್ಶಿ ಜಿ. ಅಮಾನುಲ್ಲಾ ಖಾನ್, ಎಸ್ಸಿ ಘಟಕದ ಅಧ್ಯಕ್ಷ ಕಡತಿ ಅಂಜನಪ್ಪ, ಸಿ. ಎಸ್, ಓಂಕಾರಪ್ಪ, ಧನಂಜಯ್, ಶ್ರೀನಿವಾಸ್, ಗಾಯತ್ರಿ ಹಾಲೇಶ್, ಸುನಂದಮ್ಮ, ಹೊನ್ನಮ್ಮ, ಗಂಗಾಧರಪ್ಪ, ವಿಜಯೇಂದ್ರ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ನೀಟ್ ಆನ್‌ಲೈನ್ ಪರೀಕ್ಷೆ : ಶೀಘ್ರದಲ್ಲೇ ನಿರ್ಧಾರ

**(1ನೇ ಪುಟದಿಂದ)** ಪದ್ಧತಿಯಲ್ಲಿ ವಿದ್ಯಾರ್ಥಿಗಳು ಓಎಂಆರ್ ಬಹು ಆಯ್ಕೆಯ ಪ್ರಶ್ನೆಗಳ ಮೂಲಕ ಉತ್ತರ ಬರೆಯಬೇಕಿದೆ. ನೀಟ್ ದೇಶದ ಪ್ರತಿ ದೊಡ್ಡ ಪ್ರವೇಶ ಪರೀಕ್ಷೆಯಾಗಿದೆ. 2024ರಲ್ಲಿ ದಾಖಲೆಯ 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

# ಯಮನ್ ರಾಜಧಾನಿ ಸೈನಿಕ ತಾಣದ ಮೇಲೆ ಅಮೆರಿಕ ದಾಳಿ

ಸನಾ, ಡಿ. 17- ಯಮನ್ ರಾಜಧಾನಿ ಸನಾದಲ್ಲಿರುವ ಹೌತಿ ಸೈನಿಕ ತಾಣದ ಮೇಲೆ ಬಾಂಬ್ ದಾಳಿ ನಡೆಸಿರುವುದಾಗಿ ಅಮೆರಿಕಾದ ಸೈನ್ಯ ತಿಳಿಸಿದೆ.

ಬಂಡುಕೋರರ ರಕ್ಷಣಾ ಸಚಿವಾಲಯ ಇರುವ ಸಂಕೀರ್ಣದ ಮೇಲೆ ದಾಳಿ ನಡೆಸಲಾಗಿದೆ ಎಂದು ಹೌತಿ ಮಾಧ್ಯಮಗಳು ವರದಿ ಮಾಡಿವೆ. ಇರಾನ್ ಬೆಂಬಲಿತ ಬಂಡುಕೋರರ ಮೇಲೆ ಅಮೆರಿಕಾ ನೇತೃತ್ವದ ಪಡೆಗಳು ನಡೆಸಿದ ಇತ್ತೀಚಿನ ದಾಳಿ ಇದಾಗಿದೆ.

ಅಮೆರಿಕಾದ ನೌಕಾದಳ ಹಾಗೂ ಕೆಂಪು ಸಮುದ್ರ ಮತ್ತು ಗಲ್ಫ್ ಆಫ್ ಏಡನ್‌ನಲ್ಲಿ ಸಾಗುವ ವ್ಯಾಪಾರಿ ಹಡಗುಗಳ ಮೇಲೆ ಹೌತಿಗಳು ದಾಳಿ ನಡೆಸುತ್ತಿದ್ದರು. ಈ ದಾಳಿಯ ನಿಯಂತ್ರಣ ಕೇಂದ್ರದ ಮೇಲೆ ದಾಳಿ ನಡೆಸಿರುವುದಾಗಿ ಅಮೆರಿಕಾ ತಿಳಿಸಿದೆ.

ಹತ್ತಾರು ವ್ಯಾಪಾರಿ ಹಡಗುಗಳ ಮೇಲೆ ಹೌತಿಗಳು ದಾಳಿ ನಡೆಸಿದ್ದರು. ಒಂದು ಹಡಗನ್ನು ವಶಕ್ಕೆ ತೆಗೆದುಕೊಂಡಿದ್ದರು ಹಾಗೂ ಎರಡು ಹಡಗುಗಳನ್ನು ಮುಳುಗಿಸಿದ್ದರು. ಇದರಿಂದಾಗಿ ನಾಲ್ವರು ಸಾವನ್ನಪ್ಪಿದ್ದರು.

ಇಸ್ರೇಲ್, ಅಮೆರಿಕಾ ಹಾಗೂ ಬ್ರಿಟನ್ ಹಡಗುಗಳನ್ನು ಗುರಿಯಾಗಿಟ್ಟುಕೊಂಡು ದಾಳಿ ನಡೆಸುತ್ತಿರುವುದಾಗಿ ಬಂಡುಕೋರರು ಹೇಳಿದ್ದರು. ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ಕಾರ್ಯಾಚರಣೆ ಅಂತ್ಯಗೊಳಿಸಲು ಈ ದಾಳಿ ನಡೆಸುತ್ತಿರುವುದಾಗಿ ಹೌತಿ ಬಂಡುಕೋರರು ಹೇಳಿದ್ದರು.

ಆದರೆ ದಾಳಿಗೆ ಗುರಿಯಾದ ಹಡಗುಗಳಿಗೂ ಇಸ್ರೇಲ್ ಸಂಘರ್ಷಕ್ಕೂ ಯಾವುದೇ ಸಂಬಂಧ ಇರಲಿಲ್ಲ. ಇರಾನ್‌ಗೆ ತೆರಳುತ್ತಿದ್ದ ಕೆಲ ಹಡಗುಗಳ ಮೇಲೂ ದಾಳಿ ನಡೆಸಲಾಗಿತ್ತು.

# ಹಳೇಬಾತಿ ಇಂದು ಸಂದಲ್, ನಾಳೆ ಉರುಸ್

ದಾವಣಗೆರೆ ತಾಲ್ಲೂಕಿನ ಹಳೇಬಾತಿಯಲ್ಲಿರುವ ಹಜರತ್ ಸೈಯದ್ ಚಮನ್ ಷಾವಲಿ ಬಾಬಾರವರ ಉರುಸ್ ನಾಳೆ ಗುರುವಾರ ಜರುಗಲಿದೆ.

ಇಂದು ಸಂಜೆ ಸಂದಲ್ ಆಚರಿಸಲಾಗುವುದು. ಶ್ರೀಗಂಧ ಲೇಪಿಸಿ ಗಲೀಫ (ಚಾದರ್) ಅರ್ಪಿಸುವ ಮೂಲಕ ಸಂದಲ್‌ಗೆ ಚಾಲನೆ ನೀಡಲಾಗುವುದು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಪಾಲ್ಗೊಳ್ಳುವರು.

ನಾಳೆ ಉರುಸ್ ಆಚರಿಸಲಾಗುವುದು ದರ್ಗಾದಲ್ಲಿ ಫಾತೇಹಾ ಖ್ವಾನಿ, ಪ್ರಸಾದ ವಿನಿಯೋಗ ನಡೆಯಲಿದೆ.

# ಸಾಂಸ್ಕೃತಿಕ ಮೀಸಲಾತಿ

**(1ನೇ ಪುಟದಿಂದ)** ಉದ್ದೇಶವಾಗಿದೆ. ಬಿ. ಟೆಕ್ ಹಾಗೂ ಬಿಎಸ್ ಕೋರ್ಸ್‌ಗಳಲ್ಲಿ ತಲಾ ಎರಡು ಸ್ಥಾನಗಳನ್ನು ಮೀಸಲಿಡಲಾಗುವುದು. ಇದರಲ್ಲಿ ತಲಾ ಒಂದು ಸೀಟು ಮಹಿಳೆಯರಿಗೆ ಮೀಸಲಾಗಿದೆ.

# ನಗರದಲ್ಲಿ ಇಂದು ತಾ. ಕಸಾಪ ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ - ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ಕೊಂಡಜ್ಜಿ ರಸ್ತೆಯಲ್ಲಿರುವ ಬಿಜೆಎಂ ಶಾಲೆ ಮತ್ತು ಜಿ.ಎನ್.ಬಿ. ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಎಂ ಶಾಲೆಯ ಕಾರ್ಯದರ್ಶಿ ಕೆ.ಎಸ್. ಮಂಜುನಾಥ್ ವಹಿಸಲಿದ್ದಾರೆ.

ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ರುದ್ರಮುನಿ ಹಿರೇಮಠ್ ಅವರು 'ಆಧುನಿಕ ಸಾಹಿತ್ಯ ಮತ್ತು ಸ್ವಸ್ಥ ಬದುಕು' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಹಿರಿಯ ಉಪನ್ಯಾಸಕರೂ, ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆದ ಶ್ರೀಮತಿ ಸುಮತಿ ಜಯಪ್ಪ ಅವರ ನೇತೃತ್ವದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ಶ್ರೀಮತಿ ಕೆ.ಜಿ. ಸೌಭಾಗ್ಯ, ರಟ್ಟಿಹಳ್ಳಿ ಶಿವಕುಮಾರ್ ಉಪಸ್ಥಿತರಿರುವರು.

ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡುವರು.


**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಕ್ಲಬ್ ಪಾರ್ಕ್ ಹತ್ತಿರ 30x40 North, ಕೃಷಿ ಕೇಂದ್ರ ಹಿಂಭಾಗ 30x70 North, 30x54 North, 30x40 North, 30x50 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಕೆಲಸದ ಸಮಯ : ಬೆ.9 ರಿಂದ ಸಂ. 8ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50, ದಕ್ಷಿಣ ಸೈಟ್ ಮಾರಾಟಕ್ಕಿದೆ.
70265 83333

**ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನೋಸ್ಟಿಕ್ ಪಕ್ಕದಲ್ಲಿ 780 ಚದುರಡಿ ಜಾಗ ಬಾಡಿಗೆಗೆ ಇದೆ.
92439 61523

**HOUSE FOR RENT**
2 BHK, 1ST FLOOR HOUSE
Fully Furnsihed At S.S Layout, A Block, Opp. Indoor Stadium, Davanagere.
98440 64565

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 40x84 East, 40x45 East, 30x57 East, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಜಾಗ ಬಾಡಿಗೆಗಿದೆ**
ಮೊದಲನೇ ಮಹಡಿ
ಎಂಸಿಸಿ ಬಿ ಬ್ಲಾಕ್, 7ನೇ ಕ್ರಾಸ್, 9ನೇ ಮೇನ್, ಬಾಯ್ಸ್ ಹಾಸ್ಟೆಲ್ ರಸ್ತೆ, ದಾವಣಗೆರೆ.
82177 72482

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಲೀಸ್‌ಗೆ ಇದೆ**
2BHK, 2nd Floor ಗಣೇಶ್ ಲೇಔಟ್, ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
98800 56262

**ಬೇಕಾಗಿದ್ದಾರೆ**
ಲೋಕಿಕೆರೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
99728 25666

**ತೋಟ ಮಾರಾಟಕ್ಕೆ ಇದೆ**
ದಾವಣಗೆರೆಯಿಂದ 15 ಕಿಲೋ ಮೀಟರ್ ಇದೆ. ಸ್ಟೇಟ್ ಹೈವೈ ರೋಡ್‌ಗೆ ಇದೆ. ಟೋಲ್ ಹತ್ತಿರ, ಸೈಟು ಆದ್ರೂ ಮಾಡಿಕೊಳ್ಳಬಹುದು. ಫಲಕ್ಕೆ ಬಂದಿರುವ ತೋಟ ಹಳೇ ತೋಟ 5 ಎಕರೆ 18 ಗುಂಟೆ ಮಾರಾಟಕ್ಕಿದೆ.
78996 93788, 96635 45068

**ಮನೆ ಬಾಡಿಗೆಗೆ ಇದೆ**
3 BHK ಡಬಲ್ ಡುಪ್ಲೆಕ್ಸ್, 20x20 ಉತ್ತರ, 40 ಅಡಿ. ಸೋಲಾರ್, ಬೋರ್‌ವೆಲ್ ಎಲ್ಲಾ ಕನ್ವಿನೆಂಟ್. ಸಿರಿ ನಿಲಯ, ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್, ಡೋರ್ ನಂ. 276/2 only for rent.
98449 45322

**TUITION FOR ICSE -CBSE, STATE**
1st to 10th ಮಕ್ಕಳಿಗೆ ಟ್ಯೂಷನ್ ಮಾಡಲಾಗುವುದು.
ವಿದ್ಯಾ ವಿಕಾಸ್ ಟ್ಯೂಷನ್ ಸೆಂಟರ್, ಆರೈಕೆ ಆಸ್ಪತ್ರೆ ಹಿಂಭಾಗ, ದಾವಣಗೆರೆ.
83109 32579

**WANTED**
APMC YARD Davanagere
PART TIME JOB
Computer Operator
88614 89258

**ಬೇಕಾಗಿದ್ದಾರೆ**
ಸೌಹಾರ್ದ ಸಂಸ್ಥೆಗೆ ಅಕೌಂಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 22 ರಿಂದ 45 ರ ಒಳಗೆ ಯಾವುದೇ ಪದವಿ ಮತ್ತು ಟ್ಯಾಲಿ ತಿಳಿದವರಾಗಿರಬೇಕು. ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿದೆ. ದಾವಣಗೆರೆ.
78478 40368

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ವಸತಿ ಇರುತ್ತದೆ.
98445 67456

**ಗೋದಾಮು ಬಾಡಿಗೆಗೆ**
ನಗರದ KSRTC ಬಸ್ ಸ್ಟ್ಯಾಂಡ್ ಎದುರು, ತರಕಾರಿ ಹೋಲ್‌ಸೇಲ್ ಮಾರ್ಕೆಟ್ ಪಕ್ಕದ ದಾವಣಗೆರೆ ಎಣ್ಣೆ ಸಂಕೀರ್ಣ (KOF)ನಲ್ಲಿ 1, 4800 ಚ.ಅ., 2,9800 ಚ.ಅ. ಬಾಡಿಗೆಗೆ ದೊರೆಯುತ್ತದೆ.
87625 88632

**WANTED**
(Male or Female)
Mobile Shop Work Experienced Sale Executive
Mobile Bazaar inside Reliance
98868 08414

**VULCANWEBZ TECHNO**
We offer
* Website & App Devolopment for Schools, Colleges, Hospitals and Bussiness.
* For final year projects (BCA, MCA, BE (CS) Contact :
96631 66427

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸಿಕ್ಯೂಟಿವ್
1 ರಿಂದ 2 ವರ್ಷ ಅನುಭವವುಳ್ಳವರು
ಸ್ಯಾಲರಿ+ಇನ್ಸೆಂಟಿವ್ +ಇಎಸ್‌ಐ & ಪಿಎಫ್
ಶ್ರೀನಿವಾಸ ಹೋಂಡಾ
ಹದಡಿ ಮೇನ್ ರೋಡ್, ದಾವಣಗೆರೆ.
70269 49724, 99166 31266

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಬಾಡಿಗೆಗಿದೆ**
2ಬೆಡ್ ರೂಂಗಳ ಮನೆ #1683/34 ಲಕ್ಷ್ಮೀ ನಿವಾಸ, ನೆಲ ಮಹಡಿ, 12ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ವಸಂತ ಬೆಣ್ಣೆದೋಸೆ ಹೋಟೆಲ್ ಹತ್ತಿರ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
ಗಣೇಶಪ್ಪ ಅರಳಗುಪ್ಪೆ
94497 29612

**ROOM FOR RENT**
Single Attached room with all facilities available with wardrobe and cots system at MCC 'A' Block, Near Ram Krishna Ashrama, Beside Ganesh temple.
97405 69252

**ಹೋಟೆಲ್ ಸಾಮಾಗ್ರಿಗಳು ಮಾರಾಟಕ್ಕಿವೆ**
ಸ್ಟೀಲ್ ದೋಸೆ ತವಾ, ಕಮರ್ಷಿಯಲ್ ಚಿಮ್ನಿ, ಕಾಫಿ ಸ್ಟೀಲ್ ಸ್ಟ್ಯಾಂಡ್, ಟೇಬಲ್. ಸಂಪರ್ಕಿಸಿ :
84948 20288

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

ಮನೆಗೊಂದು ಮರ ಊರಿಗೊಂದು ವನ

**ಮನೆ ಮಾರಾಟಕ್ಕಿದೆ**
ಲಾಯರ್ ರೋಡ್ ಹಿಂಭಾಗ, ದಾವಣಗೆರೆ. ಕೆ.ಟಿ. ಜಂಬಣ್ಣ ಕಾಂಪೌಂಡ್, #58/1, ಗ್ರೌಂಡ್ ಫ್ಲೋರ್‌ನಲ್ಲಿ ಹಾಲ್, ಕಿಚನ್ ರೂಂ, 1ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಹಾಲ್ ಮತ್ತು ಕಿಚನ್, ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ : ಎ. ಅಣ್ಣಪ್ಪ
73380 08453

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮನೆ ಮಾರಾಟಕ್ಕಿದೆ**
ನಿಟುವಳ್ಳಿಯ ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 2 ಬೆಡ್ ರೂಂ ಇರುವ ಆರ್.ಸಿ.ಸಿ. ಮನೆ ಮಾರಾಟಕ್ಕಿದೆ.
94486 55850

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಮಳಿಗೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse)
ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ, ಹಿಂಭಾಗ
ಹೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟಾಫ್ ನರ್ಸ್ (G.N.M) ಬೇಕಾಗಿದ್ದಾರೆ.
ಫೋನ್ ಮಾಡುವ ಸಮಯ: 10.30am to 5.30pm
ಮೊ:91414 41237

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟುಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81235 13157, 91108 97420

**ಟ್ಯುಟೋರಿಯಲ್ಸ್**
ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
98441 54413
91130 39155

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

# ದೇಶದ ವರ್ತಮಾನ ಪರಿಸ್ಥಿತಿ ಬದಲಾಯಿಸುವ ಶಕ್ತಿ ಯುವಕರಲ್ಲಿದೆ



**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಹಾವೇರಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ್ವರ ದಾನಮ್ಮನವರ**

ರಾಣೇಬೆನ್ನೂರು, ಡಿ. 17 - ದೇಶದ ವರ್ತಮಾನ ಪರಿಸ್ಥಿತಿ ಬದಲಾಯಿಸಿ ವೈಭವಯುತವಾದ ಹೊಸ ದೇಶ ಕಟ್ಟುವ ಶಕ್ತಿ ಯುವಕರಲ್ಲಿದೆ. ಕೇವಲ ಭೌಗೋಳಿಕವಾಗಿ ಯೋಚಿಸದೆ, ಭಾವನಾತ್ಮಕವಾಗಿ ಒಂದು ಗೂಡಿಕೆಯೊಂದಿಗೆ ಹೊಸ ರಾಷ್ಟ್ರ ನಿರ್ಮಾಣಕ್ಕೆ ಯುವಕರು ಸಜ್ಜಾಗಬೇಕು ಎಂದು ಹಾವೇರಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ್ವರ ದಾನಮ್ಮನವರ ಹೇಳಿದರು.

ಅವರು ಇಂದು ಸಂಜೆ ರೋಟರಿ ಕ್ಲಬ್‌ನವರ ಟ್ಯಾಗೋರ್ ಶಿಕ್ಷಣ ಸಂಸ್ಥೆಯ ಸುವರ್ಣ ಸಂಭ್ರಮ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದ ಅತಿಥಿಯಾಗಿ ಮಾತನಾಡುತ್ತಿದ್ದರು.

ವರ ದಕ್ಷಿಣೆ ಮುಂತಾದ ಸಾಮಾಜಿಕ ಪಿಡುಗುಗಳನ್ನು ವಿರೋಧಿಸಿ, ಸೌಹಾರ್ದ ಯುತ ಸಾಂಸ್ಕೃತಿಕ ವೈಭವ ಮೆರಸುವಂತಹ ರಾಷ್ಟ್ರ ನಿರ್ಮಾಣ ಇಂದಿನ ಯುವಕರದ್ದಾಗಿ ದ್ದು. ಆ ದಿಶೆಯಲ್ಲಿ ಯುವ ಶಕ್ತಿ ಹೆಜ್ಜೆ ಹಾಕಬೇಕು. ಸ್ವಾಮಿ ವಿವೇಕಾನಂದರು ಹೇಳಿದಂತೆ ಕಬ್ಬಿಣ, ಉಕ್ಕು ಹಾಗೂ ಮಿಂಚಿನ ಗುಣಗಳನ್ನು ಹೊಂದಿದ ಯುವಕರಿಂದ ಅದು ಸಾಧ್ಯವಾಗಲಿದೆ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಆಶಯ ವ್ಯಕ್ತಪಡಿಸಿದರು.

ಕೋವಿಡ್ ಸಂದರ್ಭದಲ್ಲೂ ಸಹ ಸಂಸ್ಥೆಯ ಸಿಬ್ಬಂದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಸಂಸ್ಥೆಯ ಆಡಳಿತ ಮಂಡಳಿ ಅವರು ನೋಡಿಕೊಂಡಿರುವುದು ಪ್ರಶಂಸನೀಯ, ಸಂಸ್ಥೆ ಐವತ್ತರಿಂದ ನೂರಾಗಲೀ, ದೀರ್ಘಕಾಲ ಇದೇ ಸಿದ್ಧಾಂತದಿಂದ ಸಂಭ್ರಮಿಸಲಿ ಎಂದು ಶುಭ ಹಾರೈಸಿ ಇಲ್ಲಿ ಓದುವ ವಿದ್ಯಾರ್ಥಿಗಳು ದೇಶದ ಆಸ್ತಿಯಾಗಲಿ ಎಂದು ಜಿಲ್ಲಾಧಿಕಾರಿಗಳು ಆಶಿಸಿದರು.

ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಕೇಲಗಾರ ಅಧ್ಯಕ್ಷತೆ ವಹಿಸಿದ್ದರು, ಡಿಡಿಪಿಐ ಸುರೇಶ ಹುಗ್ಗಿ, ಕಾರ್ಯದರ್ಶಿ ಕೆ.ವಿ. ಶ್ರೀನಿವಾಸ, ಕ್ಲಬ್ ಅಧ್ಯಕ್ಷ ವೀರೇಶ ಮೋಟಗಿ, ನಿರ್ದೇಶಕ ಅರವಿಂದ ಜೈನ್, ಉಮೇಶ ಹೊನ್ನಾಳಿ, ವಿ.ಪಿ. ಪೊಲೀಸ್ ಗೌಡ್ರ, ಕುಮಾರ ಮುಷ್ಟಿ ಮತ್ತಿತರರಿದ್ದರು. ಮುಖ್ಯೋಪಾಧ್ಯಯಿನಿ ಕೆ. ಗೀತಾ ಸ್ವಾಗತಿಸಿದರು. ಪ್ರಾಚಾರ್ಯ ಕೆ.ಎನ್. ಆರಿಕಟ್ಟಿ ವಂದಿಸಿದರು, ನಿರ್ದೇಶಕ ಶಂಕರ ಗೌಡ ಮಾಳಗಿ ಅತಿಥಿಗಳನ್ನು ಪರಿಚಯಿಸಿದರು. ಕೊನೆಯಲ್ಲಿ ವಿಧ್ಯಾರ್ಥಿಗಳಿಂದ ಮನರಂಜನೆ ಕಾರ್ಯಕ್ರಮಗಳು ನಡೆದವು.

# ಜೀವಕೋಶಗಳ ಅಸಹಜ ಬೆಳವಣಿಗೆ 'ಕ್ಯಾನ್ಸರ್'




**ಕದಳಿ ಮಹಿಳಾ ವೇದಿಕೆಯ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಪ್ರಸೂತಿ ತಜ್ಞರಾದ ಡಾ. ಸುಷ್ಮಾನಾಡಗೌಡ**

ದಾವಣಗೆರೆ, ಡಿ. 17- ಕ್ಯಾನ್ಸರ್ ಎಂದರೆ ಜೀವಕೋಶಗಳ ಅಸಹಜ ಬೆಳವಣಿಗೆ. ಪ್ರಯೋಗಾಲಯ ಪರೀಕ್ಷೆ ಅಥವಾ ಎಕ್ಸ್‌ರೇ ಮೂಲಕ ಕ್ಯಾನ್ಸರ್ ಅನ್ನು ಪ್ರಾಸಂಗಿಕವಾಗಿ ಪತ್ತೆ ಹಚ್ಚಬಹುದು ಎಂದು ಪ್ರಸೂತಿ ತಜ್ಞರಾದ ಡಾ. ಸುಷ್ಮಾನಾಡಗೌಡ ಹೇಳಿದರು.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿನ ತರಳಬಾಳು ಸಭಾ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಂಗ ಸಂಸ್ಥೆ ಕದಳಿ ಮಹಿಳಾ ವೇದಿಕೆಯ ಸರ್ವ ಸದಸ್ಯರ ಸಾಮಾನ್ಯ ಸಭೆ, 160 ನೇ ಕಮ್ಮಟದಲ್ಲಿ ಶರಣ ಮಾದಾರ ಚನ್ನಯ್ಯ ಮತ್ತು ಶರಣ ಒಕ್ಕಲಿಗರ ಮುದ್ದಣ್ಣ ಸ್ಮರಣೆ, ಆರೋಗ್ಯ ಜಾಗೃತಿ ಹಾಗೂ ಸದಸ್ಯರಿಗೆ ಆಟೋಟಸ್ಪರ್ಧೆಗಳ ಕಾರ್ಯಕ್ರಮದಲ್ಲಿ 'ಸರ್ವಿಕಲ್ ಕ್ಯಾನ್ಸರ್ ಮತ್ತು ಬ್ರೆಸ್ಟ್ ಕ್ಯಾನ್ಸರ್' ಕುರಿತು ಅವರು ಉಪನ್ಯಾಸ ನೀಡಿದರು.

ಪ್ರಮುಖವಾಗಿ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠ ಕ್ಯಾನ್ಸರ್ ಎಂದು ಎರಡು ವಿಧದ ಕ್ಯಾನ್ಸರ್‌ಗಳನ್ನು ಕಾಣುತ್ತೇವೆ. ಸ್ತನ ಕ್ಯಾನ್ಸರ್‌ಗಾಗಿ ಸ್ಕ್ರೀನಿಂಗ್ ಕ್ಲಿನಿಕಲ್ ಪ್ರಯೋಗಗಳು ಜನರನ್ನು ಒಳಗೊಂಡಿರುವ ಸಂಶೋಧನಾ ಅಧ್ಯಯನಗಳಾಗಿವೆ. ಮಹಿಳೆಯರಲ್ಲಿ ಸಾಮಾನ್ಯವಾಗಿ ರೋಗ ನಿರ್ಣಯದ ಕ್ಯಾನ್ಸರ್ ಪ್ರಕಾರವಾಗಿ ಉಳಿದಿದೆ.

ಗರ್ಭಕಂಠದ ಕೋಶಗಳಲ್ಲಿನ ಪೂರ್ವಭಾವಿ ಬದಲಾವಣೆಗಳು ಅಪರೂಪವಾಗಿ ರೋಗ ಲಕ್ಷಣಗಳನ್ನು ಉಂಟು ಮಾಡುತ್ತವೆ.ಕ್ಯಾನ್ಸರ್ ಆಗಿ ಬೆಳೆಯಬಹುದಾದ ಸಹಜವಾದ ಜೀವಕೋಶಗಳು ಇವೆಯೇ ಎಂದು ತಿಳಿದುಕೊಳ್ಳುವ ಏಕೈಕ ಮಾರ್ಗವೆಂದರೆ ಗರ್ಭಕಂಠದ ಸ್ಕ್ರೀನಿಂಗ್ ಪರೀಕ್ಷೆ.

ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠ ಕ್ಯಾನ್ಸರ್ ರೋಗ ಲಕ್ಷಣಗಳು, ಪರೀಕ್ಷೆಗಳು, ಚಿಕಿತ್ಸೆಯ ಮಾರ್ಗೋಪಾಯಗಳ ಬಗ್ಗೆ ಸಂಪೂರ್ಣ ಮಾಹಿತಿಯೊಂದಿಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಕದಳಿ ಮಹಿಳಾ ವೇದಿಕೆ ಪದಾಧಿಕಾರಿಗಳಾದ ಗಾಯತ್ರಿ ವಸ್ತ್ರದ್, ಕುಸುಮಾ ಲೋಕೇಶ್, ನೀಲಗುಂದ ಜಯಮ್ಮ, ಆಶಾ ಮಹಾಬಲೇಶಗೌಡ್ರು, ಪಲ್ಲವಿ ಉಮೇಶ್, ವಿಜಯ ಚಂದ್ರಶೇಖರ್, ಲಕ್ಷ್ಮೀ ಮಲ್ಲಿಕಾರ್ಜುನ್, ಸೌಮ್ಯ ಸತೀಶ್, ವಸಂತ, ನಿರ್ಮಲ ಶಿವಕುಮಾರ್, ಪೂರ್ಣಿಮಾ ಪ್ರಸನ್ನಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಂತರ ಕದಳಿ ಮಹಿಳಾ ವೇದಿಕೆ ಸರ್ವ ಸದಸ್ಯರ ವಾರ್ಷಿಕ ಸಭೆ ನಡೆಯಿತು. ರತ್ನಾ ರಡ್ಡಿ ಆಯವ್ಯಯ ಮಂಡಿಸಿದರು. ನಂದಿನಿ ಗಂಗಾಧರ ಸ್ವಾಗತಿಸಿದರು. ವಾಣಿ ರಾಜ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶಾಂತಲಾ ತೀರ್ಪುಗಾರರಾಗಿ ಭಾಗವಹಿಸಿದ್ದರು. ಚಂದ್ರಿಕಾ ಮಂಜುನಾಥ್ ನಿರೂಪಿಸಿದರು.

## ಇಂದು ಮಕ್ಕಳ ವೃತ್ತಿ ಶಿಕ್ಷಣ ಕಲಿಕೋತ್ಸವ ವಸ್ತು ಪ್ರದರ್ಶನ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿನ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಪ್ರೌಢ ಶಾಲಾ ವಿಭಾಗದಲ್ಲಿ ಇಂದು ಬೆಳಗ್ಗೆ 11ಕ್ಕೆ 'ಜಿಲ್ಲಾ ಶೈಕ್ಷಣಿಕ ಹಾಗೂ ಮಕ್ಕಳ ವೃತ್ತಿ ಶಿಕ್ಷಣ ಕಲಿಕೋತ್ಸವ' ವಸ್ತು ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ.

ಡಯಟ್ ಪ್ರಾಚಾರ್ಯೆ ಎಸ್. ಗೀತಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಜಿ. ಕೊಟ್ರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಪ್ರಭಾರಿ ಪರಿವೀಕ್ಷಕ ಬತುಲ್ ಅಖ್ತರ್, ಎಲ್. ರವಿ, ತ್ರಿವೇಣಿ, ಎಲ್.ಜಯಪ್ಪ, ಡಾ. ಪುಷ್ಪಲತಾ, ಹೆಚ್.ಆರ್. ಶೇರ್ ಅಲಿ, ಡಿ. ದುರುಗಪ್ಪ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

# ಎಗ್ಗಿಲ್ಲದ ಗಾಂಜಾ ಮಾರಾಟ ; ಕಡಿವಾಣಕ್ಕೆ ಒತ್ತಾಯ



ದಾವಣಗೆರೆ, ಡಿ.17- ಗಾಂಜಾ ಹಾಗೂ ನಶಾ ಪದಾರ್ಥಗಳ ಅನಧಿಕೃತ ಮಾರಾಟ ಮಾಡುವವರ ಬಗ್ಗೆ ಕಾನೂನು ಕ್ರಮ ವಹಿಸುವಂತೆ ಜಿಲ್ಲಾ ಬಿಜೆಪಿ ವ್ಯಾಪಾರ ಮತ್ತು ವಾಣಿಜ್ಯ ಪ್ರಕೋಷ್ಠದಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಮನವಿ ಸಲ್ಲಿಸಲಾಯಿತು.

ಜಿಲ್ಲೆಯಲ್ಲಿ ಗಾಂಜಾ ಹಾಗೂ ಇನ್ನಿತರೆ ನಶಾ ಪದಾರ್ಥಗಳು ಯಥೇಚ್ಛವಾಗಿ ಯಾವುದೇ ಹೆದರಿಕೆ ಇಲ್ಲದೆ ನಗರದಲ್ಲಿ, ಜಿಲ್ಲೆಯ ವಿವಿಧ ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಗಾಂಜಾ ಪದಾರ್ಥವನ್ನು ಹೊಲಗಳಲ್ಲಿ ಬೆಳೆದು ಮಾರಾಟ ಮಾಡುವುದು ಸಹಜವಾಗಿದೆ. ಇದು ದಿನ ದಿನಕ್ಕೂ ಹೆಚ್ಚಾಗುತ್ತಿದ್ದು, ಪೊಲೀಸರು ಇದರ ವಿರುದ್ಧ ಕ್ರಮ ವಹಿಸುವಂತೆ ಆಗ್ರಹಿಸಲಾಯಿತು.

ಗಾಂಜಾ ಸೇವನೆಯಿಂದ ಯುವಕರು ಹಾಗೂ ಯುವತಿಯರು ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳು ತ್ತಿದ್ದು, ಮಕ್ಕಳ ಭವಿಷ್ಯ ಎದುರು ನೋಡುತ್ತಿರುವ ಪೋಷಕರ ಕನಸು ನುಚ್ಚುನೂರಾಗುತ್ತಿದೆ. ಈಗಾಗಲೇ ಸಾಕಷ್ಟು ಕೊಲೆ, ಸುಲಿಗೆ, ದರೋಡೆ ಹಾಗೂ ಅಪಘಾತದಂತಹ ಸಮಾಜಕ್ಕೆ ಮಾರಕವಾಗುವ ಆಘಾತಕಾರಿ ಕ್ರಿಯೆಗಳಲ್ಲಿ ಈ ಮಾದಕ ವಸ್ತುಗಳ ಪಾತ್ರವು ದೊಡ್ಡದಿದೆ. ಪೊಲೀಸರು ತ್ವರಿತಗತಿಯಲ್ಲಿ ಕಾರ್ಯಪ್ರವೃತ್ತರಾಗದಿದ್ದರೆ ಮುಂದಿನ ದಿನದಲ್ಲಿ ರಾಜ್ಯಾದ್ಯಂತ ಬೃಹತ್ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## 22ಕ್ಕೆ ಜಿಲ್ಲಾ ಕುರುಬರ ಸಂಘದ ಸಭೆ

ದಾವಣಗೆರೆ, ಡಿ.17- ದಾವಣಗೆರೆ ಜಿಲ್ಲಾ ಕುರುಬರ ಸಂಘದ ಸಭೆಯನ್ನು ಇದೇ ದಿನಾಂಕ 22 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಶ್ರೀ ಬೀರೇಶ್ವರ ಹಾಸ್ಟೆಲ್‌ನಲ್ಲಿ ಬಿ.ಹೆಚ್. ಪರಶುರಾಮಪ್ಪ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಮಾಜದ ಎಲ್ಲಾ ಸಂಘ-ಸಂಸ್ಥೆಗಳನ್ನು ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಡಿಯಲ್ಲಿ ತರುವುದು ಮತ್ತು ದಾವಣಗೆರೆ ಜಿಲ್ಲಾ ಕುರುಬರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗುವುದು. ಸಮಾಜ ಬಾಂಧವರು ಸಭೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಲೋಕಿಕೆರೆ ಸಿದ್ದಪ್ಪ ಮನವಿ ಮಾಡಿದ್ದಾರೆ.

## ನಗರದಲ್ಲಿ ಇಂದು ಗಣಪತಿ ಹೋಮ, ಮಹಾಲಕ್ಷ್ಮಿ, ಮೃತ್ಯುಂಜಯ ಹೋಮ

ಸಂಕಷ್ಟಹರ ಗಣಪತಿ ಪೂಜಾ ಪ್ರಯುಕ್ತ ಗಡಿಯಾರ ಕಂಬದ ಶ್ರೀ ಗಣಪತಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಸಾಮೂಹಿಕ ಗಣಪತಿ ಹೋಮ, ನವಗ್ರಹ ಹೋಮ, ಶ್ರೀ ಮಹಾಲಕ್ಷ್ಮಿ ಹಾಗೂ ಶ್ರೀ ಮೃತ್ಯುಂಜಯ ಹೋಮ ನೆರವೇರಿಸ ಲಾಗುವುದು. ಸಂಜೆ ವಿವಿಧ ಪೂಜೆಗಳು ನಡೆಯಲಿವೆ.



# ಸಾಧನೆ ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ

**ಹೊನ್ನಾಳಿ ಒಡೆಯರ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದನೆ**

ಹೊನ್ನಾಳಿ, ಡಿ. 17 - ಸಾಧನೆ ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ ಎಂದು ಒಡೆಯರ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶ್ರೀ ಅಭಿನೇತ್ರಿ ಡ್ಯಾನ್ಸ್ ಅಂಡ್ ಮ್ಯೂಸಿಕ್ ಅಕಾಡೆಮಿ ಹೊನ್ನಾಳಿ ವತಿಯಿಂದ ಹಿರೇಕಲ್ಮಠದಲ್ಲಿ ಹಮ್ಮಿಕೊಂಡಿದ್ದ ಅಭಿನೇತ್ರಿ ನಾಟ್ಯ ಸಂಧ್ಯಾ ಸಂಭ್ರಮದ 22ನೇ ವರ್ಷದ ವಾರ್ಷಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮನುಷ್ಯನಿಗೆ ಸಂಗೀತ, ನಾಟಕ ಮತ್ತು ನೃತ್ಯಗಳು ಮುದ ನೀಡುತ್ತವೆ. ನಮ್ಮ ಸಂಸ್ಕೃತಿಯ ಪ್ರತೀಕವಾಗಿರುವ ಸಂಗೀತ ಹಾಗೂ ನಾಟ್ಯಗಳನ್ನು ಮಕ್ಕಳ ಮೂಲಕ ಹೊರ ತರುವ ಕಾರ್ಯವನ್ನು ಅಭಿನೇತ್ರಿ ಡ್ಯಾನ್ಸ್ ಅಂಡ್ ಅಕಾಡೆಮಿ ವತಿಯಿಂದ ಅಕಾಡೆಮಿ ಮುಖ್ಯಸ್ಥೆ ಡಾ. ಪ್ರತಿಮಾ ನಿಜಗುಣಶಿವಯೋಗಿಯವರು ಒಬ್ಬ ನೈಜ ಸಾಧಕಿಯರಾಗಿದ್ದಾರೆ ಎಂದು ಹೇಳಿದರು.

ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ಮಾತ್ರ ಕಲಾ ಪ್ರಕಾರಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟು, ಗಂಡು ಮಕ್ಕಳನ್ನು ದೂರ ಇಡುತ್ತಿದ್ದಾರೆ, ಈ ವಾರ್ಷಿಕ ಸಮಾರಂಭದಲ್ಲಿ ಇದು ವ್ಯಕ್ತವಾಗಿದ್ದು ಇದು ಶುದ್ಧ ತಪ್ಪು ಎಂದ ಅವರು, ಗಂಡು ಮಕ್ಕಳಿಗೂ ನಾಟ್ಯ ಶಾಲೆಗಳಿಗೆ ಸೇರಿಸಿ ಅವರ ಪ್ರತಿಭೆ ಅನಾವರಣಕ್ಕೆ ಸದಾವಕಾಶ ಮಾಡಿಕೊಡಬೇಕು ಎಂದರು.

ಮಕ್ಕಳ ಪ್ರತಿಭೆಗಳು ಹೊರಹೊಮ್ಮಲು ಇಂತಹ ವೇದಿಕೆಗಳು ಸಹಾಯ ಮಾಡುತ್ತವೆ. ಶ್ರೀಮಠದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ಶ್ರೀಮಠಕ್ಕೆ ಕರೆ ತಂದು ಭಾಗವಹಿಸಲು ಸಹಕಾರ ನೀಡಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಎಚ್.ಎಸ್. ಸುಮಿತ್ರ ರೇಣುಕಾಚಾರ್ಯ, ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ಅಕ್ಕ, ನಿವೃತ್ತ ಮುಖ್ಯೋಪಾಧ್ಯಾಯ ಎಂ.ಪಿ.ಎಂ. ವಿಜಯಾನಂದಸ್ವಾಮಿ, ಪುರಸಭೆ ಸದಸ್ಯ ಡಾ. ಹೊಸಕೇರಿ ಸುರೇಶ್, ಕಸಬಾ ಸೊಸೈಟಿ ಅಧ್ಯಕ್ಷ ಬಿ. ಎಲ್.ಕುಮಾರಸ್ವಾಮಿ ಮಾತನಾಡಿದರು.

ಹರಿಹರ ಲಕ್ಷ್ಮೀಶ ಕಲಾ ಸಂಘದ ಗಮಕ ಶಿಕ್ಷಕಿ ಉಮಾ ಆರ್. ಭಟ್ ಮತ್ತು ಸಂಗಡಿಗರಿಂದ ಸಂಗೀತ ಮತ್ತು ಗಮಕ ಕಾರ್ಯಕ್ರಮ ನಡೆಯಿತು. ಅಭಿನೇತ್ರಿ ಡ್ಯಾನ್ಸ್ ಅಂಡ್ ಅಕಾಡೆಮಿ ಮುಖ್ಯಸ್ಥೆ ಡಾ. ಪ್ರತಿಮಾನಿಜ ಗುಣಶಿವಯೋಗಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಷ್ಮಾ ಜಯಪ್ಪ ನಿರೂಪಿಸಿದರು.

# ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶಾಮನೂರು ರಸ್ತೆ, ಎಸ್.ಎಸ್. ಲೇಔಟ್, ಎ.ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತ ಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡ ರಸ್ತೆವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತ ಮುತ್ತ ಪ್ರದೇಶಗಳು, ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಎಂಜಿ ರಸ್ತೆ, ಎನ್ ಆರ್ ರಸ್ತೆ, ಬೆಳ್ಳೂಡಿ ಗಲ್ಲಿ, ಮಹಾವೀರ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಮಂಡಕ್ಕಿ ಭಟ್ಟಿ, 1 ರಿಂದ 10 ನೇ ಕ್ರಾಸ್, ಇಂದಿರಾನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಕ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್. ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗೂ ಇ. ಎಸ್.ಐ ಆಸ್ಪತ್ರೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಪಿ.ಬಿ. ರಸ್ತೆ. ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್, ಶಿವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ ಹಾಗು ಸುತ್ತಮುತ್ತ ಪ್ರದೇಶಗಳು ಪೊಲೀಸ್ ಕ್ವಾಟ್ರಸ್, ಅರುಣಾ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಎಂ.ಸಿ.ಸಿ. 'ಎ' ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಎಸ್.ಎಸ್. ಬಡಾವಣೆ 'ಎ' ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗು ಸುತ್ತಮುತ್ತ ಪ್ರದೇಶಗಳು.

ಪಿ.ಬಿ. ರಸ್ತೆ, ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕಾ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಡೆಂಟಲ್ ಕಾಲೇಜ್ ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದುವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜ್ ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರೋಡ್ ಹಾಗೂ ಸುತ್ತ ಮುತ್ತ ಪ್ರದೇಶಗಳು, ಎಂ.ಬಿ. ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇ.ಡಬ್ಲ್ಯೂ.ಎಸ್. ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, 17 ಎಫ್-19 ಇಎಸ್‌ಐ: ಇ. ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಶಕ್ತಿನಗರ, ಬನಶಂಕರಿ ದೇವಸ್ಥಾನದ ಸುತ್ತಮುತ್ತ, ರಾಜೇಂದ್ರ ಬಡಾವಣೆ, ಮೀನು ಮಾರುಕಟ್ಟೆ, ಜೋಗಲ್ ಬಾಬಾ ಲೇ ಔಟ್, ಮುಸ್ತಾಫಾ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು,

ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ. ಬಸವೇಶ್ವರ ನಗರ, ಹರಿಹರ ರಸ್ತೆ, ವಿಜಯನಗರ, ಅಶೋಕನಗರ, ಆರ್.ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ, ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೆಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ, ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ರೆಡ್ಡಿ ಕ್ಯಾಂಪ್, ಪುಟಗನಾಳು, ಶ್ರೀರಾಮನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



## ವಿದ್ಯಾನಗರ ಈಶ್ವರ - ಪಾರ್ವತಿ - ಗಣಪತಿ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆ, ಡಿ. 17- ಇಲ್ಲಿನ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ದೇವಸ್ಥಾನದ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ಹಾಗೂ ದೇವಸ್ಥಾನ ಸಮಿತಿಯ ಸದಸ್ಯ ಬೆಳವನೂರು ಪ್ರಭುದೇವ್, ಡಾ.ಮಂಜುನಾಥ್ ತೆಂಬದ್, ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಹಾಗೂ ದೇವಸ್ಥಾನದ ಸರ್ವ ಭಕ್ತಾದಿಗಳ ಸಮ್ಮುಖದಲ್ಲಿ ಕಡೆ ಕಾರ್ತಿಕ ನೆರವೇರಿಸಲಾಯಿತು.

**ಓದುಗರ ಪತ್ರ**

## ಪಾದಚಾರಿ ರಸ್ತೆ ದುರಸ್ತಿಗೊಳಿಸಿ..!

ಮಾನ್ಯರೇ,




ನಗರದ ಬಿಐಇಟಿ ರಸ್ತೆಯ ಹಳೇ ಆರ್.ಟಿ.ಓ ಬಳಿ ಇರುವ ಪಾದಚಾರಿ ರಸ್ತೆಯ ಕಾಮಗಾರಿ ಸ್ಥಗಿತಗೊಂಡಿದ್ದರಿಂದ ಅಲ್ಲಿನ ಜಲ್ಲಿಕಲ್ಲು, ಮರಳು ಗುಂಪಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಿವೆ.

ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಕುವೆಂಪು ನಗರ ಮತ್ತು ಬಿ.ಐ.ಇ.ಟಿ ಕಾಲೇಜಿಗೆ ಹೋಗುವ ಪ್ರಮುಖ ರಸ್ತೆ ಇದಾಗಿದ್ದು, ಮೊನ್ನೆ ಇಲ್ಲಿನ ಮೆಡ್ ಪ್ಲಸ್ ಔಷಧಿ ಅಂಗಡಿಗೆ ಬಂದಿದ್ದ ಹಿರಿಯ ನಾಗರಿಕರೊಬ್ಬರು ಔಷಧಿ ಕೊಂಡು ಅಲ್ಲಿನ ಜಲ್ಲಿ-ಕಲ್ಲಿನ ಮೇಲೆ ಸಾಗುವಾಗ ಆಯ ತಪ್ಪಿ ಬಿದ್ದಿದ್ದರಿಂದ ಗಾಯಗೊಂಡಿದ್ದರು.

ಇಂತಹ ಅವಘಡಗಳು ನಿತ್ಯವೂ ಸಂಭವಿಸುತ್ತಿದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಪಾದಚಾರಿ ರಸ್ತೆ ದರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಬೇಕು.

**- ರಘುನಾಥರಾವ್ ತಾಪ್ಸೆ,** ನಿವೃತ್ತ ಬ್ಯಾಂಕ್ ಅಧಿಕಾರಿ, ದಾವಣಗೆರೆ.

# ಮಾಧ್ಯಮಗಳು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲಿ

## 'ಮಕ್ಕಳ ಹಕ್ಕುಗಳು, ಆರೋಗ್ಯ ಹಾಗೂ ರಕ್ಷಣೆ' ಕಾರ್ಯಾಗಾರದಲ್ಲಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಭಿಮತ

ದಾವಣಗೆರೆ, ಡಿ.17- ಪ್ರಸಕ್ತ ದಿನಮಾನಗಳಲ್ಲಿ ಮಾಧ್ಯಮಗಳು ಮಕ್ಕಳ ಹಕ್ಕುಗಳ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕಿದೆ ಎಂದು ದಾವಣಗೆರೆ ವಿವಿಯ ಕುಲಪತಿ ಪ್ರೊ.ಬಿ.ಡಿ. ಕುಂಬಾರ ತಿಳಿಸಿದರು.

ಯುನಿಸೆಫ್, ಮೈಸೂರು ವಿಶ್ವವಿದ್ಯಾನಿಲಯ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಸಹಯೋಗದಲ್ಲಿ ದಾವಣಗೆರೆ ವಿವಿಯಲ್ಲಿ ಮಂಗಳವಾರ ಆಯೋಜಿಸಿದ್ದ 'ಮಕ್ಕಳ ಹಕ್ಕುಗಳು, ಆರೋಗ್ಯ ಹಾಗೂ ರಕ್ಷಣೆ' ಕುರಿತಾದ 2 ದಿನದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಮಕ್ಕಳು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹೋರಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಮಾಧ್ಯಮಗಳು ಅವರ ಮೇಲಾಗುವ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಬೇಕಿದೆ ಎಂದು ಹೇಳಿದರು.



ಮಕ್ಕಳ ಹಕ್ಕುಗಳ ರಕ್ಷಣೆ ಕೇವಲ ಯುನಿ ಸೆಫ್ ಜವಾಬ್ದಾರಿ ಅಲ್ಲ, ಅದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಆಗಿದೆ. ಹಾಗಾಗಿ ಮಕ್ಕಳ ಮೇಲಿನ ಶೋಷಣೆಗಳು ಹಾಗೂ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳನ್ನು ನಾವು ರಕ್ಷಿಸಬೇಕು ಎಂದರು.

ಇಂದಿನ ದಿನಗಳಲ್ಲಿ ಮಕ್ಕಳ ಮೇಲೆ ಮಾನಸಿಕ ಹಾಗೂ ದೈಹಿಕ ದೌರ್ಜನ್ಯ ಪ್ರಕರಣ ಗಳು ಹೆಚ್ಚಾಗುತ್ತಿವೆ. ಹಿಂದೆಲ್ಲಾ ಮಕ್ಕಳಿಗಾಗಿ ಪತ್ರಿಕೆಗಳಲ್ಲಿ ವಿಶೇಷ ಪುಟಗಳು ಬರುತ್ತಿದ್ದವು, ಆದರೆ ಈಗ ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯಗಳ ಸುದ್ದಿಗಳೇ ಹೆಚ್ಚಾಗಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಲಿಂಗ ಸಮಾನತೆ ಕಾಯ್ದುಕೊಳ್ಳಲು ಜಾಗತಿಕ ಮಟ್ಟದಲ್ಲಿ ಪ್ರಯತ್ನಗಳು ನಡೆದಿದೆ. ಆದರೆ ನಮ್ಮ ದೇಶದಲ್ಲಿ ಗಂಡು ಸಂತಾನದ ವ್ಯಾಮೋಹದಿಂದ ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗಿ ನಡೆಯುತ್ತಿವೆ. ಇದರಿಂದಾಗಿ ರೈತಾಪಿ ವರ್ಗದ ವರಿಗೆ ಹೆಣ್ಣು ಸಿಗದ ಪರಿಸ್ಥಿತಿ ಉದ್ಭವಿಸಿದೆ ಎಂದರು.

ಭ್ರೂಣ ಹತ್ಯೆ, ಬಾಲ್ಯ ವಿವಾಹ, ಬಾಲಕಾರ್ಮಿಕ ಹಾಗೂ ಲಿಂಗ ತಾರತಮ್ಯವನ್ನು ತೊಲಗಿಸಲು ಮಾಧ್ಯಮಗಳು ಜನರಿಗೆ ಅರಿವು ಮೂಡಿಸಬೇಕಾಗಿದೆ ಎಂದು ಹೇಳಿದರು.

ಮೈಸೂರು ವಿವಿಯ ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗದ ಅಧ್ಯಕ್ಷೆ ಸ್ವಪ್ನಾ ನಾಯ್ಕ್ ಮಾತನಾಡಿ, ಕೊರೋನ ನಂತರದ ದಿನಗಳಲ್ಲಿ ಮಕ್ಕಳನ್ನು ನಿರ್ಲಕ್ಷ್ಯವಾಗಿ ಕಾಣಲಾಗುತ್ತಿದೆ ಎಂಬುದು ಯುನೆಸ್ಕೋ ವಾದವಾಗಿದೆ.

ಮಕ್ಕಳೊಂದಿಗೆ ಒಡನಾಟ ಕಡಿಮೆ ಆಗಿರುವುದರಿಂದ ಅವರಲ್ಲಿ ಮಾನಸಿಕ ಖಿನ್ನತೆ ಆರಂಭವಾಗುತ್ತಿದೆ. ಹಾಗಾಗಿ ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಅಧ್ಯಯನ ನಡೆಯಬೇಕಿದೆ ಎಂದರು.

ಯುನಿಸೆಫ್ ಹೈದರಾಬಾದ್‌ನ ಪ್ರೊಸುನ್‌ಸೇನ್ ಮಾತನಾಡಿ, ಮಕ್ಕಳ ಮೇಲೆ ಹೇರುವ ಒತ್ತಡಗಳಿಂದ ಅವರು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹಾಗಾಗಿ ಪಾಲಕರು ಅವರಿಗೆ ಒತ್ತಡ ಹೇರದೆ, ಅವರ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು.

ಈ ವೇಳೆ ದಾವಣಗೆರೆ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಕ್ಷ ಪ್ರೊ. ಶಿವಕುಮಾರ ಕಣಸೋಗಿ, ಮಂಜುನಾಥ ಸುಬೇದಾರ್ ಮತ್ತಿತರರಿದ್ದರು.

# ತಾರಸಿ ತೋಟ ಮಾಡಿ ತಾಜಾ, ವಿಷಮುಕ್ತ ತರಕಾರಿ ಸೇವಿಸಬೇಕು

ದಾವಣಗೆರೆ, ಡಿ. 17- ಇರುವ ಸೀಮಿತ ಜಾಗದಲ್ಲೇ ಮಹಿಳೆಯರು ತಾರಸಿ ತೋಟ ಮಾಡುವ ಮೂಲಕ ತಾಜಾ ಹಾಗೂ ವಿಷಮುಕ್ತ ಆಹಾರ ಸ್ವಾವಲಂಬನೆ ಸಾಧಿಸಬೇಕಲ್ಲದೇ ಆರೋಗ್ಯವಂತ ಜೀವನ ಹೊಂದಬೇಕೆಂದು ಕಸ-ರಸ ತಜ್ಞರಾದ ಡಾ. ಶಾಂತಾ ಭಟ್ ನಗರ ನಿವಾಸಿಗಳಿಗೆ ಕರೆ ನೀಡಿದರು.

ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಸ್ವದೇಶಿ ಮೇಳದ 2ನೇ ದಿನದ ಕಾರ್ಯಕ್ರಮದ ನಿಮಿತ್ತ ಏರ್ಪಡಿಸಿದ್ದ ತಾರಸಿ ತೋಟ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಹಜವಾಗಿಯೇ ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ ನಗರ ಪ್ರದೇಶದ ಮನೆಗಳಲ್ಲಿ ಜಾಗದ ಲಭ್ಯತೆ ಕಡಿಮೆ ಇರುತ್ತದೆ. ಆದರೂ, ಲಭ್ಯ ಜಾಗವನ್ನೇ ಜಾಣತನದಿಂದ ಬಳಸಿಕೊಂಡಲ್ಲಿ ತರಕಾರಿ, ಸೊಪ್ಪು ಖರೀದಿಗೆ ಮಾರುಕಟ್ಟೆಗೆ ಹೋಗುವ ಫಜೀತಿಯೇ ಇರುವುದಿಲ್ಲ. ಮನೆಯ ತಾರಸಿ, ಕಿಟಕಿ ಗೋಡೆ, ಬಾಲ್ಕನಿ, ಕಾಂಪೌಂಡ್ ಗೋಡೆ ಹೀಗೆ ಸಾಧ್ಯವಾದ ಕಡೆಗೆಲ್ಲಾ ದೈನಂದಿನ ಅಗತ್ಯದ ಸೊಪ್ಪು, ತರಕಾರಿಯನ್ನು ಬೆಳೆದುಕೊಳ್ಳಬಹುದು. ಜಾಗ ಇಲ್ಲ ಎಂಬುದು ನೆಪ ಮಾತ್ರ. ಸೃಜನಶೀಲತೆಯಿಂದ ಯೋಚಿಸಿದಲ್ಲಿ ತಾಜಾ ತರಕಾರಿಗಳನ್ನು ಮನೆಯಲ್ಲೇ ಬೆಳೆಯಬಹುದು ಎಂದರು.



ಹೊರಗಿನ ಮಾರುಕಟ್ಟೆಯಲ್ಲಿ ಸಿಗುವ ತರಕಾರಿ, ಸೊಪ್ಪು ಬೆಳೆಯಲು ರಾಸಾಯನಿಕ ಬಳಸಲಾಗುತ್ತದೆ. ಅಲ್ಲದೆ, ಅವುಗಳಲ್ಲಿ ಪೌಷ್ಠಿಕಾಂಶ ಕೂಡ ಕಡಿಮೆ ಇರುತ್ತದೆ. ಹಾಗಾಗಿ ಜಾಗದ ಅಭಾವವಿರುವ ನಗರ ಪ್ರದೇಶದಲ್ಲಿ ತಾರಸಿ ತೋಟದ ಮೂಲಕ ಹೂವು, ತರಕಾರಿ, ಸೊಪ್ಪು ಬೆಳೆಯಬಹುದು. ಹಸಿ ತ್ಯಾಜ್ಯವನ್ನು ಗೊಬ್ಬರ ಮಾಡಿ, ತಾರಸಿ ತೋಟಕ್ಕೆ ಬಳಸಿಕೊಳ್ಳುವುದರಿಂದ ಕಸ ಉತ್ಪತ್ತಿಯೂ ಕಡಿಮೆಯಾಗುತ್ತದೆ. ಇದರಿಂದ ವಿಷಮುಕ್ತ, ತಾಜಾ ತರಕಾರಿ ತೋಟದಿಂದ ನೇರವಾಗಿ, ಅಡುಗೆ ಮನೆಗೆ ಬಂದಂತಾಗುತ್ತದೆ ಎಂದು ಅವರು ತಿಳಿಸಿದರು.

ಮಹಿಳೆಯರು ಬಿಡುವಿನ ವೇಳೆಯಲ್ಲಿ ತಾರಸಿ ತೋಟದಲ್ಲಿ ತೊಡಗಿಸಿಕೊಳ್ಳುವುದರಿಂದ ಮನಸ್ಸು ಆಹ್ಲಾದವಾಗಿರುತ್ತದೆ. ದೈಹಿಕ ಮತ್ತು ಮಾನಸಿಕ ನೆಮ್ಮದಿಸಿಗುತ್ತದೆ.ಎಲ್ಲೆಡೆಕಾಂಕ್ರೀಟೀಕರಣವಾಗುತ್ತಿರುವ ಇಂದಿನ ದಿನಗಳಲ್ಲಿ ಮಣ್ಣು ಎಂದರೆ ಕೊಳಕು ಎಂಬ ಭಾವನೆ ಮೊದಲು ಹೋಗಬೇಕು. ತಾರಸಿ ಭಾರ ತಡೆಯುವುದಿಲ್ಲ ಅನ್ನೋ ಚಿಂತೆ ಬೇಡ. ನೀರು ಸರಾಗವಾಗಿ ಹರಿದುಹೋಗುವಂತೆ ಇಳಿಜಾರು ಮಾಡಿದಲ್ಲಿ ತಾರಸಿ ತೋಟದಿಂದ ಮನೆಯ

**ತಾರಸಿ ತೋಟ ತರಬೇತಿ ಕಾರ್ಯಾಗಾರದಲ್ಲಿ ಡಾ.ಶಾಂತಾ ಭಟ್**

ಕಟ್ಟಡಕ್ಕೇನೂ ಧಕ್ಕೆಯಾಗದು ಎಂದು ಅವರು ವಿವರಿಸಿದರು.

ಗಿಡ ಬೆಳೆಯಲು ಭಾರವಾದ ಸಿಮೆಂಟ್ ಪಾಟ್ ಬಳಸಬಾರದು, ಹಗುರವಾದ ಪ್ಲಾಸ್ಟಿಕ್ ಪಾಟ್, ಗೋ ಬ್ಯಾಗ್, ಹಳೆಯ ಪೇಂಟ್, ಡಬ್ಬಿ, ಪ್ಲಾಸ್ಟಿಕ್ ಬಕೆಟ್ ಹೀಗೆ ನಾನಾ ಸಾಮಗ್ರಿಗಳನ್ನು ಬಳಸಿಕೊಂಡು ತಾರಸಿ ತೋಟ ಮಾಡಬಹುದು, ಪಾಟ್ ಇಡಲು ಸ್ಟ್ಯಾಂಡ್ ಅಥವಾ ಅಂಚು ಕಲ್ಲುಗಳನ್ನು ಬಳಸಬೇಕು. ಬೇಕಿದ್ದಲ್ಲಿ ತಾರಸಿಗೆ ವಾಟರ್ ಪ್ರೂಫ್ ಪೇಂಟ್ ಮಾಡಬಹುದು. ಏನೇ ಮಾಡಬೇಕಿದ್ದರೂ ಕ್ರಿಯಾಶೀಲತೆ, ಆಸಕ್ತಿ ಅಗತ್ಯವೇ ಹೊರತು ಸಂಪನ್ಮೂಲಗಳು ಅಲ್ಲ ಎಂದು ಅವರು ಕಿವಿಮಾತು ಹೇಳಿದರು.

ಸ್ವದೇಶಿ ಮೇಳದ ಸಂಚಾಲಕರಾದ ಮಂಜುಳಾ ಮಹೇಶ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಟಿ.ಎನ್.ದೇವರಾಜ, ತೋಟಗಾರಿಕೆ ತಜ್ಞ ಎಂ.ಜಿ.ಬಸವನಗೌಡ ಮತ್ತಿತರರು ಕಾರ್ಯಾಗಾರದಲ್ಲಿ ಹಾಜರಿದ್ದರು.

# ಆರ್ಥಿಕ ಆಧಾರದ ಮೇಲೆ ಮೀಸಲಾತಿಗೆ ಸಂಸತ್ತು ಚಿಂತಿಸಲಿ

ನವದೆಹಲಿ, ಡಿ. 17- ಮೀಸಲಾತಿಯನ್ನು ಜಾತಿ ಆಧಾರದ ಮೇಲೆ ನೀಡುವುದನ್ನು ಮುಂದುವರಿಸಬೇಕೇ ಅಥವಾ ಇದನ್ನು ಆರ್ಥಿಕ ಮಾನದಂಡಕ್ಕೆ ಬದಲಿಸಬೇಕೇ ಎಂಬ ಬಗ್ಗೆ ಸಂಸತ್ತು ಚಿಂತಿಸಬೇಕು ಎಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ದೇವೇಗೌಡ ಕರೆ ನೀಡಿದ್ದಾರೆ.



ಸಂವಿಧಾನ ಅಂಗೀಕಾರಗೊಂಡು 75 ವರ್ಷ ತುಂಬಿದ ಹಿನ್ನೆಲೆಯಲ್ಲಿ, ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ದೇವೇಗೌಡರು, ಈ ಹಿಂದೆ ಏನಾಗಿದೆ ಎಂಬ ಬಗ್ಗೆ ಸದನವೇ ಪರಿಶೀಲಿಸಬೇಕು. ಕೇವಲ ಬಡತನದ ಆಧಾರದ ಮೇಲೆ ಮೀಸಲಾತಿ ನೀಡಬೇಕೇ ಎಂಬ ಬಗ್ಗೆ ಚಿಂತಿಸಬೇಕು ಎಂದು ಹೇಳಿದ್ದಾರೆ.

ಈ ಹಿಂದೆ ನಾವು ಮೀಸಲಾತಿ ನೀಡಿದ ನಂತರವೂ ಜನ ಬಳಲುತ್ತಿದ್ದಾರೆ. ಮೀಸಲಾತಿಯಿಂದ ಜನರನ್ನು ಮೇಲಕ್ಕೆತ್ತಲು ಸಾಧ್ಯವಾಗಿಲ್ಲ. ಜನ ಈಗಲೂ ಎರಡು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ಹೇಳಿದರು.

ಈ ಹಿಂದಿನ ಮಾನದಂಡಗಳ ಆಧಾರದ ಮೇಲೆಯೇ ಮೀಸಲಾತಿ ನೀಡುವುದನ್ನು ಮುಂದುವರಿಸಬೇಕೇ ಅಥವಾ ಬಡತನದಿಂದ ಅತಿ ಹೆಚ್ಚು ಪೀಡಿತವಾದವರಿಗೆ ಮೀಸಲಾತಿ ನೀಡಬೇಕೇ ಮತ್ತು ಸಂಕಷ್ಟದಲ್ಲಿ ಬದುಕುತ್ತಿರುವವರಿಗೆ ಮೀಸಲಾತಿ ನೀಡಬೇಕೇ ಎಂಬ ಬಗ್ಗೆ ಚಿಂತಿಸಬೇಕು ಎಂದವರು ಹೇಳಿದರು.



**ಕಾಳಿಕಾಂಬ ದೇವಸ್ಥಾನದಲ್ಲಿ ದೀಪೋತ್ಸವ**

ದಾವಣಗೆರೆಯ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಮಂಗಳವಾರ ಸಂಜೆ ವಿಜೃಂಭಣೆಯಿಂದ ಕಾರ್ತಿಕ ದೀಪೋತ್ಸವ ನಡೆಯಿತು. ಬೆಳಿಗ್ಗೆ ಶ್ರೀ ದೇವಿಗೆ ವಿಶೇಷ ಪೂಜೆಗಳ ನಂತರ ಸಂಜೆ ದೇವಸ್ಥಾನದಲ್ಲಿ ಸೇರಿದ್ದ ಅಪಾರ ಭಕ್ತರ ಸಮ್ಮುಖದಲ್ಲಿ ಕಾರ್ತಿಕೋತ್ಸವವನ್ನು ಆಚರಿಸಲಾಯಿತು.

# 24ರಂದು ನಗರದೇವತೆ ದುರ್ಗಾಂಬಿಕಾ ದೇವಿ ಕಾರ್ತಿಕ



ದಾವಣಗೆರೆ, ಡಿ. 17- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವವು ಇದೇ ದಿನಾಂಕ 24ರ ಮಂಗಳವಾರ ರಾತ್ರಿ 8.30 ಗಂಟೆಗೆ ನೆರವೇರಲಿದೆ. ಟ್ರಸ್ಟ್‌ನ ಗೌರವ ಅಧ್ಯಕ್ಷರೂ ಆದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕಾರ್ತಿಕೋತ್ಸವಕ್ಕೆ ಚಾಲನೆ ನೀಡುವರು. ಅಂದು ಬೆಳಿಗ್ಗೆ 6 ಕ್ಕೆ ಶ್ರೀ ದುರ್ಗಾಂಬಿಕಾ ದೇವಿಗೆ ಪಂಚಾಮೃತ ಅಭಿಷೇಕ ನಂತರ ಬೆಳಿಗ್ಗೆ 9 ರಿಂದ ಹೂವಿನ ಹಾರದ ಮೆರವಣಿಗೆ ನಡೆಸಲಾಗುವುದು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ


ಡಿ.ಸಿ.ಎಂ., ಹನುಮಂತಪ್ಪ ಪಾರ್ಕ್, ಡಿ.ಸಿ.ಎಂ ಸರ್ಕಲ್, ಬಾಲಾಜಿ ಬಡಾವಣೆ, ರಾಜೇಂದ್ರ ಬಡಾವಣೆ, ಬನಶಂಕರಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಕೆ.ಬಿ. ಬಡಾವಣೆ 4ನೇ ಮೇನ್, ಲಾಯರ್‌ರೋಡ್, ಬಿಲಾಲ್ ಕಾಂಪೌಂಡ್, ಶಂಕರ್ ಕಾಂಪೌಂಡ್, ಸುಲ್ತಾನ್ ಗೋಲ್ಡ್, ಈರುಳ್ಳಿ ಮಾರ್ಕೆಟ್, ಪಂಜುರ್ಲಿ ಹೋಟೆಲ್, ಕೆ.ಎಸ್.ಆರ್.ಟಿ.ಸಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಐಎಂಎ ಮಹಿಳಾ ವಿಭಾಗದ ವಾರ್ಷಿಕೋತ್ಸವ




ದಾವಣಗೆರೆ, ಡಿ.17- ನಗರದ ಐಎಂಎ ಮಹಿಳಾ ವಿಭಾಗದ ವಾರ್ಷಿಕೋತ್ಸವವನ್ನು ಐಎಂಎ ಆವರಣದಲ್ಲಿ ಇಂದು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಡಾ. ಹರ್ಷ ಬುಳ್ಳಾಪುರ ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ತ್ರಿವೇಣಿ ಮಲ್ಲೇಶ್ ವಹಿಸಿದ್ದರು. ವೇದಿಕೆಯಲ್ಲಿ ಸಂಸ್ಥೆಯ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಬಾಯಾರಿಕೆ ತೀರಿಸಿಕೊಂಡ ಕುರಿಹಿಂಡು...

ಚಿತ್ರ: ಜಿಗಳಿ ಪ್ರಕಾಶ್

ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮುಂಗಾರು ಹಂಗಾಮಿನ ಭತ್ತದ ಕಟಾವು ಭರದಿಂದ ಸಾಗಿದ್ದು, ಭತ್ತದ ಕಟಾವು ಆಗಿ ಖಾಲಿ ಇರುವ ಗದ್ದೆಗಳಲ್ಲಿ ಕುರಿಗಳನ್ನು ಮೇಯಿಸಲು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಕುರಿಗಾಯಿಗಳು ತಮ್ಮ ಕುರಿ ಹಿಂಡುಗಳು ಹೊಡೆದುಕೊಂಡು ಬಂದಿದ್ದಾರೆ. ಮಂಗಳವಾರ ಮಲೇಬೆನ್ನೂರು-ಜಿಗಳಿ ರಸ್ತೆಯಲ್ಲಿ ಮೇವು ಹರಸಿ ಹೋಗುತ್ತಿದ್ದ ಕುರಿ ಹಿಂಡುಗಳು ಬಾಯಾರಿಕೆ ತೀರಿಸಿಕೊಳ್ಳಲು ರಸ್ತೆ ಪಕ್ಕದ ಅಡಿಕೆ ತೋಟದ ಗುಂಡಿಗಳಲ್ಲಿ ನಿಂತಿದ್ದ ನೀರನ್ನು ಕುಡಿಯುತ್ತಿರುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.

# ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರಾಗಿ ಜಗಳೂರು ಶಾಸಕ ಬಿ. ದೇವೇಂದ್ರಪ್ಪ



ಜಗಳೂರು, ಡಿ. 17 - ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 2025ರ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 7ನೇ ವರ್ಷದ ವಾಲ್ಮೀಕಿ ಜಾತ್ರೆಯ ಜಾತ್ರಾ ಸಮಿತಿ ಅಧ್ಯಕ್ಷರನ್ನಾಗಿ ಜಗಳೂರು ಶಾಸಕ ಚಿಕ್ಕಮ್ಮನಹಟ್ಟಿ ಬಿ. ದೇವೇಂದ್ರಪ್ಪ ಅವರನ್ನು ಬೆಳಗಾವಿಯಲ್ಲಿ ಗುರುವಾರ ನಡೆದ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಪೀಠಾಧಿಪತಿಗಳಾದ ಶ್ರೀ ಪ್ರಸನ್ನಾನಂದಪುರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸಮ್ಮುಖದಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

# ಆರೋಗ್ಯ ಇಲಾಖೆಯ 33 ಸಾವಿರ ಹುದ್ದೆಗಳ ಭರ್ತಿ

ಬೆಳಗಾವಿ, ಡಿ. 17- ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 32,870 ವಿವಿಧ ಹುದ್ದೆಗಳನ್ನು ಭರ್ತಿ ಮಾಡಲಾಗುವುದೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂ ರಾವ್ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಡಾ.ಎಂ.ಜಿ.ಮುಳೆ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಖಾಲಿ ಇರುವ ಹುದ್ದೆಗಳಲ್ಲಿ ಶೇ.30ರಷ್ಟು ಗ್ರೂಪ್ 'ಡಿ', ಶೇ.45ರಷ್ಟು ವೈದ್ಯಕೀಯೇತರ ವರ್ಗದ ಹುದ್ದೆಗಳನ್ನು ಒಟ್ಟಾರೆ ಶೇ.75ಕ್ಕೆ ಮೀರದಂತೆ ಭರ್ತಿ ಮಾಡಲಾಗುವುದು ಎಂದರು.

ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಮೊದಲು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲಾಗುವುದು.

ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಕೆಲವು ಷರತ್ತಿಗೆ ಒಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಡಳಿತಕ್ಕೆ ಅನುಮತಿ ನೀಡಲಾಗಿದೆ.

ಇಲಾಖೆ ಮುಖಾಂತರ ಸೇವಾ ನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ಸರಿಸಮಾನ ಹುದ್ದೆಗೆ ನೇಮಿಸಲಾಗುತ್ತಿದೆ.

ಅಲ್ಲದೆ, ಇಲಾಖೆಯಲ್ಲಿ ಖಾಲಿ ಇರುವ 120 ತಜ್ಞ ವೈದ್ಯರು ಹಾಗೂ 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲಾಗುವುದು, ಇದರಿಂದ ರೋಗಿಗಳಿಗೆ ಅಡಚಣೆ ಆಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.

ಫಾರ್ಮಸಿ ಅಧಿಕಾರಿಯ 400 ಹುದ್ದೆ, ಕಿರಿಯ ವೈದ್ಯಾಧಿಕಾರಿ, ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಯ 150 ಹುದ್ದೆ, ವಿಕಿರಣ ಶಾಸ್ತ್ರದ 8 ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲಾಗುವುದು.

ಅಲ್ಲದೆ, ಇಲಾಖೆಯಲ್ಲಿ ಖಾಲಿ ಇರುವ 9,871 ಅರೆ ವೈದ್ಯಕೀಯ ಹುದ್ದೆಗಳ ಭರ್ತಿಗೆ ಅನುಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ ಎಂದರು.

# ಟೆನ್ನಿಸ್ ಡಬಲ್ಸ್ ಪಂದ್ಯದಲ್ಲಿ ವೈದ್ಯ ಡಾ. ಸುಬ್ಬರಾವ್, ವಕೀಲ ಮಂಜುನಾಥ್ ಅವರಿಗೆ ಮೊದಲ ಸ್ಥಾನ




ದಾವಣಗೆರೆ, ಡಿ. 17- ಮೂರು ದಿನಗಳ ರಾಜ್ಯ ಮಟ್ಟದ ಟೆನ್ನಿಸ್ ಪಂದ್ಯಾವಳಿಯು ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದ ಸಿಂಥೆಟಿಕ್ ಕೋರ್ಟ್, ದಾವಣಗೆರೆ ಕ್ಲಬ್ ಹಾಗೂ ಆಫೀಸರ್ಸ್ ಕ್ಲಬ್‌ನ ಕ್ಲೇ ಕೋರ್ಟುಗಳಲ್ಲಿ ನಡೆದ ಪಂದ್ಯಾವಳಿಯಲ್ಲಿ ಸುಮಾರು 435 ಕ್ರೀಡಾ ಪಟುಗಳು ವಿವಿಧ ವಿಭಾಗಗಳಲ್ಲಿ ಭಾಗವಹಿಸಿದ್ದರು.

ಈ ಪಂದ್ಯಾವಳಿಯಲ್ಲಿ 65 ವಯಸ್ಸಿನ ಡಬಲ್ಸ್ ವಿಭಾಗದಲ್ಲಿ ದಾವಣಗೆರೆಯ ಆಫೀಸರ್ ಕ್ಲಬ್‌ನ ಡಾ. ಸುಬ್ಬರಾವ್ ಹಾಗು ವಕೀಲ ಜಿ.ಆರ್. ಮಂಜುನಾಥ್ ಅವರುಗಳು ಮೊದಲನೇ ಸ್ಥಾನ ಪಡೆದು, ಚಾಂಪಿಯನ್ಸ್ ಆಗಿದ್ದಾರೆ.

# ನೀರು ಸರಬರಾಜು ಯೋಜನೆ ಕಾಮಗಾರಿ ಪ್ರಗತಿ ವೀಕ್ಷಿಸಿದ ಸವಿತಾ ಹುಲ್ಲುಮನೆ

ದಾವಣಗೆರೆ, ಡಿ. 17- ಮಹಾನಗರ ಪಾಲಿಕೆಗೆ ಜಲಸಿರಿ ಯೋಜನೆ ಯಡಿಯಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಕೈಗೊಂಡಿರುವ 24 X7 ನೀರು ಸರಬರಾಜು ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಕಾಮಗಾರಿ ಪ್ರಗತಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್ ಅವರು ಅಧಿಕಾರಿಗಳೊಂದಿಗೆ ರಾಜನಹಳ್ಳಿ, ಬಾತಿ ಪಂಪ್‌ಹೌಸ್‌ಗಳಿಗೆ ನಿನ್ನೆ ಭೇಟಿ ನೀಡಿ ಪರಿಶೀಲಿಸಿದರು.

ಹಲವಾರು ವಾರ್ಡ್‌ಗಳಲ್ಲಿ ಪ್ರತಿ ಮನೆಗಳಿಗೂ ಅಗತ್ಯವಿರುವ ನೀರಿನ ವ್ಯವಸ್ಥಿತ ಸರಬರಾಜು ಮಾಡಲು ತುರ್ತಾಗಿ ಬಾತಿಯಲ್ಲಿನ 40 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕವನ್ನು ಕಾರ್ಯಾರಂಭಗೊಳಿಸಬೇಕು ಮತ್ತು ಇದಕ್ಕೆ



ಅವಶ್ಯಕವಾಗಿರುವ ವಿದ್ಯುತ್ ಇಲಾಖೆಯ ತಾಂತ್ರಿಕ ಅನುಮೋದನೆಯನ್ನು ಶೀಘ್ರವಾಗಿ ಪಡೆದು, ವಿದ್ಯುತ್ ಸಂಪರ್ಕ ಕಲ್ಪಿಸಿ ಚಾಲನೆಗೊಳಿಸಲು ಸೂಕ್ತ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂತೆಯೇ ಬಾತಿ ಹತ್ತಿರ ರೈತರ ಜಮೀನಿನಲ್ಲಿ ಪಾಲಿಕೆಯ ನೀರು ಸರಬರಾಜು ಪೈಪ್ ಒಡೆದು ಸೋರಿಕೆಯಾಗುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಇದರಿಂದ ಪೈಪ್ ಲೈನ್ ಹಾದು ಹೋಗಿರುವ ರೈತರ ಬೆಳೆಗಳಿಗೆ ತೊಂದರೆ ಯಾಗದಂತೆ ಮತ್ತು ಈಗಾಗಲೇ ನಗರದಲ್ಲಿ ನೀರು ಸರಬರಾಜಿನಲ್ಲಿ ತೊಂದರೆಯಾಗಿದ್ದು, ಶೀಘ್ರವಾಗಿ ದುರಸ್ತಿ ಕಾಮಗಾರಿ ಪೂರ್ಣಗೊಳಿಸಿ ನಗರಕ್ಕೆ ನೀರು ಸರಬರಾಜು ಮಾಡಲು ಸೂಕ್ತ ಕ್ರಮ ವಹಿಸುವಂತೆ ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಔಷಧ ಅಂಗಡಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ದಾವಣಗೆರೆ, ಡಿ. 17 - ಆರೋಗ್ಯ ಕಾಪಾಡುವ ನೆಪದಲ್ಲಿ ಬಹುತೇಕ ಔಷಧ ಅಂಗಡಿಗಳು ಜನರನ್ನು ಸುಲಿಗೆ ಮಾಡುತ್ತಿದ್ದು, ಇಂತಹ ಅಂಗಡಿಗಳ ವಿರುದ್ಧ ಜಿಲ್ಲಾ ಔಷಧ ನಿಯಂತ್ರಣಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಒತ್ತಾಯಿಸಿದ್ದಾರೆ.

ಔಷಧ ಅಂಗಡಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಹಲವಾರು ಔಷಧ ಅಂಗಡಿಗಳು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಜನರಿಗೆ ಮೋಸ ಮಾಡುತ್ತಿವೆ. ಒಂದರ್ಥದಲ್ಲಿ ಹಗಲು ದರೋಡೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವೈದ್ಯರ ಚೀಟಿ ಇಲ್ಲದೆ ಮಾತ್ರೆ ಕೊಡುವಂತಿಲ್ಲ ಎಂಬ ನಿಯಮವಿದ್ದರೂ, ಹಲವು ಔಷಧ ಅಂಗಡಿಗಳು ತಾವೇ ವೈದ್ಯರಂತೆ ವರ್ತಿಸುತ್ತಿವೆ. ಅಲ್ಲದೇ, ಔಷಧ-ಮಾತ್ರೆಗಳನ್ನು ನಿಗದಿತ ಬೆಲೆಗಿಂತ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿವೆ. ಇದಕ್ಕೆ ಯಾವುದೇ ರಶೀದಿ ಕೂಡಾ ಇರುವುದಿಲ್ಲ ಎಂದು ಅವರು ದೂರಿದ್ದಾರೆ.

ತಿಳುವಳಿಕೆ ಇಲ್ಲದ ಜನರು ಅಥವಾ ವೈದ್ಯರ ಬಳಿ ಹೋಗಲು ಸಮಯಾವಕಾಶ ಇಲ್ಲದ ಜನರು ಅಥವಾ ವೈದ್ಯರಿಗೆ ಶುಲ್ಕ ನೀಡಿ ಪರೀಕ್ಷೆಗೊಳಪಡುವ ಸ್ಥಿತಿಯಲ್ಲಿರದ ಬಡವರು ಅಥವಾ



ನಿಗದಿತ ಸಮಯದಲ್ಲಿ ವೈದ್ಯರು ಸಿಗದಂತ ಸಂದರ್ಭದಲ್ಲಿ ತುರ್ತಾಗಿ ಬರುವ ಜನರಿಗೆ ತಾವೇ ಇಂತಹ ಮಾತ್ರೆ-ಔಷಧಿ ತೆಗೆದುಕೊಳ್ಳಿ ಎಂದು ಹೇಳುವುದಲ್ಲದೇ ಇದೇ ಸಂದರ್ಭ ಎಂದುಕೊಂಡು ಔಷಧಿ-ಮಾತ್ರೆಗಳಿರುವ ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಔಷಧಿ ಅಂಗಡಿಗಳ ಸಂಖ್ಯೆ ಹೆಚ್ಚಾಗುತ್ತಿವೆ. ಇಂತಹ ಅಂಗಡಿಗಳ ವಿರುದ್ಧ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.


ಇಂತಹ ವರ್ತನೆಯುಳ್ಳ ಅಂಗಡಿಗಳು ಹಿಂದುಳಿದ ಪ್ರದೇಶ ಮತ್ತು ಕೊಳಚೆ ಪ್ರದೇಶಗಳಲ್ಲಿ ಹೆಚ್ಚಾಗಿವೆ. ವೈದ್ಯರ ಸಲಹೆ ಪಡೆದು ಅವರಿಂದ ಚೀಟಿ ತನ್ನಿ ಎಂದು ತಿಳುವಳಿಕೆ ನೀಡಬೇಕು. ವೈದ್ಯರು ಪರೀಕ್ಷೆ ಮಾಡಿ ನೀಡುವ ಚೀಟಿ ಇಲ್ಲದೆ ತೆಗೆದುಕೊಳ್ಳುವ ಮಾತ್ರೆಗಳಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಔಷಧಿ ಅಂಗಡಿಗಳು ಜನರಿಗೆ ತಿಳುವಳಿಕೆ ನೀಡಬೇಕು. ಆದರೆ ಹಣ ಮಾಡು ವುದೇ ಉದ್ದೇಶವಾಗಿಟ್ಟುಕೊಂಡು ಕೆಲ ಔಷಧಿ ಅಂಗಡಿ ಗಳು ವರ್ತಿಸುತ್ತಿವೆ ಎಂದು ಅವರು ಕಿಡಿ ಕಾರಿದರು.

**ವೈದ್ಯರ ವಿರುದ್ಧ ಕ್ರಮಕ್ಕೆ ಆಗ್ರಹ :** ಹಲವು ಪಾಲಿಕ್ಲಿನಿಕ್‌ಗಳು ಮತ್ತು ನರ್ಸಿಂಗ್ ಹೋಂಗಳ ವರ್ತನೆಯೂ ಮಿತಿಮೀರಿವೆ. ತಾವು ಪರೀಕ್ಷಿಸಿ ಸೂಚಿಸುವ ಮಾತ್ರೆ - ಔಷಧಿಯನ್ನು ತಾವು ಸೂಚಿಸುವ ಔಷಧಿಯಂಗಡಿಯಲ್ಲಿ ಅಥವಾ ತಮ್ಮ ಆಸ್ಪತ್ರೆ ಆವರಣದಲ್ಲಿರುವ ಔಷಧಿ ಅಂಗಡಿಗಳಲ್ಲೇ ಖರೀದಿಸಬೇಕೆಂಬ ವೈದ್ಯರ ವರ್ತನೆ ಖಂಡನೀಯ ಎಂದು ನಾಗರಾಜ್ ತಿಳಿಸಿದ್ದಾರೆ.

ತಾವು ಸೂಚಿಸುವ ಔಷಧಿ-ಮಾತ್ರೆಗಳನ್ನು ಬೇರೆ ಕಡೆಯ ಅಂಗಡಿಗಳಲ್ಲಿ ಖರೀದಿಸಿದರೆ ಗುಣಮುಖರಾಗುವುದಿಲ್ಲ ಎನ್ನುವ ರೀತಿಯಲ್ಲಿ ರೋಗಿಗಳಿಗೆ ಮನವರಿಕೆ ಮಾಡುವಲ್ಲಿ ಕೆಲ ವೈದ್ಯರು ಪ್ರಯತ್ನಿಸುತ್ತಾರೆ. ಅಲ್ಲದೇ ಅವರು ಸೂಚಿಸುವ ಮಾತ್ರೆ ಬೇರೆ ಎಲ್ಲೂ ಸಿಗದಂತೆ ಚೀಟಿ ಬರೆದು ಕೊಡುವಲ್ಲಿ ಕೆಲ ವೈದ್ಯರು ನಡೆದುಕೊಳ್ಳುತ್ತಿದ್ದಾರೆ. ಇಂತಹ ವೈದ್ಯರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾಗರಾಜ್ ಒತ್ತಾಯಿಸಿದ್ದಾರೆ.

ಇಂತಹ ವೈದ್ಯರು ಮತ್ತು ಔಷಧಿ ಅಂಗಡಿಗಳ ವಿರುದ್ಧ ಜಿಲ್ಲಾ ಔಷಧ ನಿಯಂತ್ರಣಾಧಿಕಾರಿಗಳು, ಜಿಲ್ಲಾ ಆರೋಗ್ಯ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದರ ಮೂಲಕ ಬಡ ಜನರನ್ನು ರಕ್ಷಿಸಬೇಕು ಎಂದು ನಾಗರಾಜ್ ಕಳಕಳಿ ವ್ಯಕ್ತಪಡಿಸಿದ್ದಾರೆ.

# ನಗರದ ಮಹಾರಾಜಪೇಟೆ ವಿಠ್ಠಲ ಮಂದಿರದಲ್ಲಿ ಇಂದು ಕಾರ್ತಿಕೋತ್ಸವ



ಮಹಾರಾಜ ಪೇಟೆಯ ಶ್ರೀ ವಿಠ್ಠಲ ಮಂದಿರದಲ್ಲಿ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿ ವತಿಯಿಂದ 6ನೇ ವರ್ಷದ ಶ್ರೀ ವಿಠ್ಠಲ ರುಕುಮಾಯಿ ದೇವರ ಕಾರ್ತಿಕೋತ್ಸವವು ಇಂದು ಸಂಜೆ 6 ಗಂಟೆಗೆ ಭಜನೆಯೊಂದಿಗೆ ನಡೆಯಲಿದೆ.

ಬೆಳಿಗ್ಗೆ 5 ಗಂಟೆಗೆ ಅಭಿಷೇಕ ಪೂಜೆ, ಕಾಕಡಾರತಿ, ಭಜನೆ, ಶ್ರೀ ಜ್ಞಾನೇಶ್ವರಿ ಪಾರಾಯಣ ಹರಿಪಾಠ ನಡೆಯಲಿದೆ ಎಂದು ತರುಣ ಮಂಡಳಿ ಅಧ್ಯಕ್ಷ ವಿನಾಯಕ ಟೀಕಾರೆ, ಕಾರ್ಯದರ್ಶಿ ವಿಶ್ವನಾಥ್ ಪುಟಾಣ್‌ಕರ್ ತಿಳಿಸಿದ್ದಾರೆ.

# 116 ಪ್ಯಾಸೆಂಜರ್ ರೈಲುಗಳಿಗೆ ಮರುಸಂಖ್ಯೆ



ದಾವಣಗೆರೆ, ಡಿ.17 - ನೈರುತ್ಯ ರೈಲ್ವೆ ವಲಯದ 116 ಪ್ಯಾಸೆಂಜರ್ ವಿಶೇಷ ರೈಲುಗಳನ್ನು ನಿಯಮಿತ ರೈಲು ಸಂಖ್ಯೆಗಳೊಂದಿಗೆ ಮರುಸಂಖ್ಯೆ ನೀಡಲು ನಿರ್ಧರಿಸಿದೆ. ಅಸ್ತಿತ್ವದಲ್ಲಿರುವ '0' ಸಂಖ್ಯೆಯ ವ್ಯವಸ್ಥೆಯನ್ನು '5', '6' ಅಥವಾ '7' ರಿಂದ ಪ್ರಾರಂಭವಾಗುವ ಸಂಖ್ಯೆಗಳೊಂದಿಗೆ ಬದಲಾಯಿಸಲಾಗುವುದು. ಈ ಬದಲಾವಣೆ ಜನವರಿ 1, 2025 ರಿಂದ ಜಾರಿಗೆ ಬರಲಿದೆ. ಅನಾನುಕೂಲತೆ ತಪ್ಪಿಸಲು ಪ್ರಯಾಣಿಕರು ಪರಿಷ್ಕೃತ ರೈಲು ಸಂಖ್ಯೆಗಳನ್ನು ಗಮನಿಸಬೇಕು ಎಂದು ನೈರುತ್ಯ ರೈಲ್ವೆ, ಹುಬ್ಬಳ್ಳಿ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.

ಹೊಸ ನಿಯಮಿತ ರೈಲು ಸಂಖ್ಯೆಗಳನ್ನು ತಿಳಿಯಲು, ದಯವಿಟ್ಟು ಈ ಲಿಂಕ್ ಮೇಲೆ ಕ್ಲಿಕ್ ಮಾಡಿ https://swr.indianrailways.gov.in/view_detail.jsp?lang=0&dcd=8122&id=0,4,268

**ಜೆ.ಎಸ್. ರೇವಣ್ಣ ನಿಧನ**



ದಾವಣಗೆರೆ ಸಿಟಿ ಶ್ರೀನಿವಾಸ ನಗರ, 4ನೇ ಕ್ರಾಸ್ ವಾಸಿ
ದಿ. ಶೆಟ್ಟಪ್ಪಳನವರ ಸಾವಿತ್ರಮ್ಮ ದಿ. ಸಿದ್ದಪ್ಪನವರ ಪುತ್ರ

**ಜೆ.ಎಸ್. ರೇವಣ್ಣ**

ಇವರು ದಿನಾಂಕ : 16.12.2024ರ ಸೋಮವಾರ ಬೆಳಿಗ್ಗೆ 8.30ಕ್ಕೆ ಶಿವಾಧೀನರಾದರು. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 18.12.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರಿನ ವೀರಶೈವ ರುದ್ರ ಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು : ಪತ್ನಿ : ಶ್ರೀಮತಿ ರೇಖಾ, ಮಕ್ಕಳು : ಶರತ್, ಶ್ರೀಮತಿ ಶಾಲಿನಿ, ಶ್ರೀ ಪ್ರಶಾಂತ, ಮೊಮ್ಮಕ್ಕಳು : ಶ್ರಾವ್ಯ ಹಾಗೂ ಶೆಟ್ಟಪ್ಪಳನವರ ವಂಶಸ್ಥರು. ಮೊ : 89041 33276

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas